Reg. No. M. 1550

15–5–1936

KODAGU

IF NOT

delivered

please return to

"KODAGU"

OFFICE,

MERCARA.

ಕೊಡಗು

ಅಚ್ಚುಮೆಚ್ಚಿನ

ಮುದ್ರಣ ಕಲಸಕ್ಕೆ

"ಕೊಡಗು"

ಮುದ್ರಣ

ಮಂದಿರ.

ಹೆಚ್ಚಿನ ವಿಷಯಕ್ಕೆ

ಕೂಡಲೆ ವಿಚಾರಿಸಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩–೮–೦.

ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೧೫–೫–೧೯೩೬ [ಸಂಚಿಕೆ ೪೮

Telephone:
3145

By Appointment
To H. E The Governor of Madras.

Telegrams:
'PRECIOUS.'

Brooch



Ring.

Ring.

Necklace.

V. SUBRAMANIA IYER,

Jeweller, & Diamond Merchant,

52–25 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enquiry

BANKING FACILITIES OF EVERY DESCRIPTION.

Head office:—UDIPI.

BRANCHES:—

1. Madras,
2. Coondapoor.
3. Car Street, Mangalore,
4. Bunder, Mangalore.
5. Shimoga.
6. Udipi
7. Mercara.
8. Virarajendrapet.

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,69,936.

BANKERS AT—

1. Bombay.
2. Calcutta.
3. Karachi.
4. Bangalore.
5. Mysore.
6. Calicut.
7. Cannanore.
8. Cochin, and other important places.

To those thinking of investments the following figures should strongly appeal.

Capital: Anthorised, issued and subscribed—Rs. 3,50,000.

Paid up Rs. 2,87,435.

Deposits—Rs. 27,99,323. Working Capital—Rs. 35,66,707.

The Canara Banking Corporation Udipi Limited.

52—26 Estd. 1906.

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1917ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಲಾಭಗಳನ್ನೆಲ್ಲಾ

ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%

ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%

ಪಾಲಿಸಿಯ ಶರತ್ತುಗಳು ಅತೀ ಸುಲಭ

ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿವೆ.

ವಿಜೆನ್ಸ್ ನಿಯಮಗಳು ಅತೀ ಲಾಭದಾಯಕವಿದ್ದು

ಸಂತೋಷಾರೂಪಕ್ಕೆ ಕವಿಶನ್ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಕೆ. ಡಿ. ಭಾಗವತ, ಎಫ್. ಎ. ಎಸ್. (ಲಂಡನ್),

ಜನರಲ್ ಮ್ಯಾನೇಜರ್, ದಿ ಜನರಲ್ ಅಷ್ಯೂರೆನ್ಸ್

ಸೊಸೈಟಿ ಲಿಮಿಟೆಡ್, ಆಫೀಸರ್. ಆಡಳಿತ—

ಎ. ಎಫ್ ಎಸ್ ಅಯ್ಯಂಗಾರ್.

ಸುಪರಿಂಟಿಂಡೆಂಟ್, ಜನರಲ್ ಅಷ್ಯೂರೆನ್ಸ್ ಬಿಲ್ಡಿಂಗ್,

ಚಾಮರಾಜಪೇಟೆ, 3ನೇ ರೋಡ

52—48 ಬೆಂಗಳೂರು

ವಿವಿಧ ವಾರ್ತಾವಳಿ.

ಉಪಾಧ್ಯಾಯರು ಶಾಲೆಗ ಹೋಗಬೇಕಾದ ಆವಶ್ಯಕತೆಯಿಲ್ಲ.

ರೇಡಿಯೋ ಮೂಲಕ ಶಿಕ್ಷಣ ಪ್ರಚಾರ.

ನ್ಯೂಯೊರ್ಕ್ ಯುನಿವರ್ಸಿಟಿಯಲ್ಲಿ ಉಪಾಧ್ಯಾಯರಿಗೆ ಶಾಲೆಗೆ ಹೋಗಬೇಕಾದ ಆವಶ್ಯಕತೆ ಇಲ್ಲ. ಅಲ್ಲಿ ರೇಡಿಯೋ ಯಂತ್ರಗಳನ್ನು ಇಟ್ಟಿರುವುದಾಗಿ ತಿಳಿದುಬಂದಿದೆ. ಉಪಾಧ್ಯಾಯರು ಮನೆಯಲ್ಲೇ ಸ್ವಚಿತ್ತರಾಗಿ ಕುಳಿತು ಪಾಠವನ್ನೂ, ಭಾಷಣವನ್ನೂ ಕೊಡುವರು. ಅದೆಲ್ಲವೂ ರೇಡಿಯೊ ಮುಖಾಂತರ ಶಾಲೆಯಲ್ಲಿ ಬಾಲಕರಿಗೆ ಸ್ಪಷ್ಟವಾಗಿ ಕೇಳಿಬರುವುದು.

—೦೦೦—

ಪ್ರಪಂಚದ ಅತೀ ದೊಡ್ಡ ಕಾಳಿಂಗ ಸರ್ಪ.

ಹದಿನೆಂಟು ಅಡಿ ಉದ್ದವಿರುವ ಕಾಳಿಂಗ ಸರ್ಪವೊಂದು ಲಂಡನಿನ ಮೃಗಾಲಯಕ್ಕೆ ಕಳಹಿಸಲಾಗಿದೆ. ಇದನ್ನು ಮಲಯದ್ವೀಪದ ಘೋರ ಅರಣ್ಯದಲ್ಲಿ ಹಿಡಿದರು: ಇದು ಕಚ್ಚಿದರೆ ಮರಣಕ್ಕೆ ಕೆಲವೇ ನಿಮಿಷಗಳು ಸಾಕಾಗುವುವು. ಬಾಟು ಗುಹೆಗಳಲ್ಲಿ ಸರ್ಪಗಳು ಹೆಚ್ಚು. ಅಲ್ಲಿಯ ಸ್ಥಳೀಕರ ಸಹಾಯ ಪಡೆದು ಆ ಭಯಂಕರ ಅರಣ್ಯದೊಳಗಿನ ಗುಹೆಗಳನ್ನು ಪ್ರವೇಶಿಸಿ ಇದನ್ನು ಹಿಡಿದಿರುವರು. ಇದಕ್ಕಷ್ಟು ಉದ್ದದ ಕಾಳಿಂಗವು ಪ್ರಪಂಚದಲ್ಲಿ ಮತ್ತೊಂದು ಕಾಣಸಿಕ್ಕಿದುದಿಲ್ಲ.

—೦೦೦—

ಮಂಗನು ಮನುಷ್ಯರಂತೆ ಮೂತಾಡಬಲ್ಲನು.

ಲಂಡನಿನ ಪ್ರಾಣಿವರ್ಗದಲ್ಲಿ ಮಂಗಗಳಿಗೆ ಮೂತಾಡಿಸಲು ಕಲಿಸುತ್ತಿದ್ದಾರೆ. ಪಾಠವು ಮೂರ್ಕ ಚಿಕ್ಕ ಪ್ರಾಯದಿಂದಲೇ ಕಲಿಸಬೇಕಾಗಿರುತ್ತದೆ. ತತ್ಕಾಲಕ್ಕೆ ಸರ್ ರಿಚರ್ಡ್ ಪೆಜೆಟ್ ಎಂಬವರು ಎರಡು ವರ್ಷ ಪ್ರಾಯದ ಮಂಗಗಳನ್ನು ಭಾಷೆ ಕಲಿಸಲು ಪ್ರಾರಂಭಿಸಿರುವರು. ಎರಡು ತಿಂಗಳುಗಳಿಂದಲೂ ಈ ಪಾಠಗಳು ಕ್ರಮಪ್ರಕಾರವಾಗಿ ನಡೆಸುತ್ತಾ ಬಂದಿವೆ. ಇಷ್ಟರಲ್ಲೇ ತಮ್ಮ ಆಹಾರವು ಎಲ್ಲಿಂದ ಬರುತ್ತದೆ ಎಂಬುದನ್ನು ಕೇಳಲು ಶಕ್ತವಾಗಿರುವುದಂತೆ.

—೦೦೦—

ಶ್ರೀ. ಭುಲಭಾಯಿ ದೇಸಾಯಿಯವರು.



ಆರೋಗ್ಯ ಸಂಪಾದನೆಯ ನಿಮಿತ್ತ ಶ್ರೀ. ಭುಲಭಾಯಿ ದೇಸಾಯಿಯವರು ಇದೇ ತಾ. ೫ ರಲ್ಲು ವಿಮಾನ ಮಾರ್ಗವಾಗಿ ಯೂರೋಪಿಗೆ ಹೊರಟು ಹೋಗಿರುವರು. ಯುರೋಪಿನಲ್ಲವರು ಜೂನ್ ತಿಂಗಳ ಅಂತ್ಯದ ವರೆಗೆ ವಾಸಿಸಲಿರುವರು.

—೦೦೦—

ಕರ್ನಾಟಕದ ಸುಪ್ರಸಿದ್ಧ ಲೇಖಕರ ವಿವಾಹ.

ಉಚ್ಚ ತರಗತಿಯ ವ್ಯಂಗ ಲೇಖಕರೂ, ನಾಟಕಕಾರರೂ ಆದ ಶ್ರೀಮಾನ್ ಕೋಟಿ ಶಿವರಾಮ ಕಾರಂತರು ಈ ತಾರೀಕು 6ನೇ ಬುಧವಾರ ಶ್ರೀ ಕೆ. ಟಿ. ಅಳ್ವರ ಪುತ್ರಿ ಲೀಲಾವತಿಯನ್ನು ವಿವಾಹವಾದರು. ಕಾರಂತರು ಬ್ರಾಹ್ಮಣರು: ಹುಡುಗಿಯು ಒಂಟಿ ಸನ್ಯಾಜದವಳು. ಈ ವಿಚಿತ್ರೆಯು ಅಂತರ್ಜಾತೀಯ ವಿವಾಹವನ್ನನುಮೋದಿಸುವವರಿಗೆಲ್ಲ ಆನಂದವನ್ನುಂಟುಮಾಡಿದೆ. ನವದಂಪತಿಗಳು ವಿವಾಹವಾದ ಕೂಡಲೇ ಪೂನೆಗೆ ವಿಹಾರಾರ್ಥ (Honeymoon) ಹೊರಟು ಹೋಗಿರುವರಂತೆ.

—೦೦೦—

ಈಜಿಪ್ಟಿನ ಮಹಾ ಚುನಾವಣೆ.

ಈಜಿಪ್ಟ್ ರಾಜ್ಯದಲ್ಲೂ ಈಗ ಮಹಾ ಚುನಾವಣೆಗಳು. ವಾಫ್ಡ್ ಎಂಬ ಉಗ್ರ ರಾಷ್ಟ್ರೀಯ ಪಕ್ಷದವರಿಗೆ ಪ್ರಚಂಡ ವಿಜಯವಾಗಿದೆ. ಸರಕಾರದ ಸ್ಥಾನಗಳ ಪೈಕಿ ೧೬೩ ವಾಫ್ಡ್ ಪಕ್ಷದವರಿಗೇ ಬಂದಿದೆ ಇತರ ಸ್ಥಾನಗಳು ಬೇಳ ಪಕ್ಷಗಳವರಿಗೆ ಹಂಚಿ ಹೋಗಿವೆ.

ಈಗಿನ ದೊರೆಗಳಿಗೆ ಇನ್ನೂ ವಯಸ್ಸು ಬಂದಿಲ್ಲ. ಅವರು ವಯಸ್ಕರಾಗುವವರೆಗೂ ರಾಜ್ಯಭಾರವನ್ನು ನಡೆಸಲು ಒಂದು ಮಂಡಲಿಯು ರಚನೆಯಾಗಿದೆ.

—೦೦೦—

ಮನುಷ್ಯನು ಪಕ್ಷಿಗಳಂತೆ ಆಕಾಶದಲ್ಲಿ ಹಾರಾಡಬಲ್ಲನು.

ಮೈಮಿ ಪ್ರಾಂತ್ಯದ ಕ್ಲೈವ್ ಸೋಹನ ಎಂಬವನು ತನ್ನ ದೇಹದ ಇಕ್ಕೆಡೆಗಳಲ್ಲೂ ಗರಿಗಳನ್ನು ಬಿಗಿಯಾಗಿ ಕಟ್ಟಿ ಪಕ್ಷಿಗಳಂತೆ ನಭದಲ್ಲಿ ಹಾರಿ ಭೂತಲಕ್ಕೆ ಬಂದು ಮುಟ್ಟಿದನು. ಮೊದಲು ವಿಮಾನದಲ್ಲಿ ಹತ್ತು ಸಾವಿರ ಅಡಿ ಮೇಲಕ್ಕೇರಿ ಕಡೆಗೆ ಅಲ್ಲಿಂದ ಕೃತಕ ಗರಿಗಳನ್ನು ಕಟ್ಟಿ ಭೂತಲಕ್ಕೆ ಹಾರಿದನು. ಕೃತಕ ಗರಿಗಳು ಅವನನ್ನು ಆಕಾಶದಲ್ಲಿ ತೇಲಿಸಿ ಸ್ವಲ್ಪ ಸಮಯದಲ್ಲೇ ಸುರಕ್ಷಿತವಾಗಿ ಭೂಮಿಗೆ ತಂದು ಮುಟ್ಟಿಸಿದುವು. ಇನ್ನು ಮನುಷ್ಯರೂ ಪಕ್ಷಿಗಳಂತೆ ಹಾರಾಡಬಹುದಲ್ಲವೇ! ವಿಜ್ಞಾನ ಯುಗವು ಏನನ್ನು ತಾನೇ ಮಾಡಲಾರದು!

—೦೦೦—

ಚೈನಾ ಸರಕಾರದ ಸುಗ್ರೀವಾಜ್ಞೆ.

ಚೈನಾ ಸರಕಾರವು ಒಂದು ಕಟ್ಟಾಜ್ಞೆಯನ್ನು ಮಾಡಿದೆ. ಪರದೇಶಗಳಿಗೆ ವಿದ್ಯಾರ್ಥಿಗಳಾಗಿ ಹೋದವರು ಅಲ್ಲಿನ ಹುಡುಗಿಯರನ್ನು ಕಟ್ಟಿಕೊಂಡು ಬರುತ್ತಿದ್ದರಂತೆ ಇದು ವಿಪರೀತವಾಗುತ್ತಿರುವ ಕಾರಣ, ಇನ್ನು ಮುಂದೆ ಯಾವ ಚೀನನೂ ಪರದೇಶೀಯ ಸ್ತ್ರೀಯರನ್ನು ಲಗ್ನವಾಗಕೂಡದೆಂದು ಆ ಆಜ್ಞೆಯು ನಿಷೇಧಿಸುತ್ತದೆ.

ಈ ಸಂದರ್ಭವು ಹೀಗೆ ಬಿದ್ದಿತು. ಬೆಲ್ಜಿಯಂ ದೇಶದಲ್ಲಿ ಕುವೊ ಎಂಬ ವಿದ್ಯಾರ್ಥಿಯೊಬ್ಬ ಒಬ್ಬ ಬೆಲ್ಜಿಯನ್ ಹುಡುಗಿಯನ್ನು ಮದುವೆಮಾಡಿಕೊಳ್ಳಲು ಅನುಜ್ಞೆಬೇಕೆಂದು ಚೀನ ಸರಕಾರವನ್ನು ಪ್ರಾರ್ಥಿಸಿದನಂತೆ ಚೀನ ಸರಕಾರವು ಇಂತಹ ವಿವಾಹ ಸಂಕರಣವು ಹೆಚ್ಚಾಗುತ್ತಿರುವುದನ್ನು ಗಮನಕ್ಕೆ ತಂದುಕೊಂಡು ಮೇಲ್ಕಂಡಂತೆ ಆಜ್ಞೆ ಮಾಡಿತು.

14 ವರ್ಷಗಳ ಹಿಂದೆ ಒಮ್ಮೆ ಇದೇ ರೀತಿಯ ಆಜ್ಞೆಯು ಹೊರಟಿತ್ತಂತೆ. ಆದರೆ ಯಾರೂ ಅದನ್ನು ಲಕ್ಷ್ಯವೂಡಿರಲಿಲ್ಲ.

ಚೀನ ಹುಡುಗಿಯರೂ ಪರದೇಶಿಯರನ್ನು ಮದುವೆಯಾಗಕೂಡದೆಂದು ಅದೇ ಆಜ್ಞೆಯು ನಿಷೇಧಿಸುತ್ತದೆ. ಹಾಗೆ ಆ ಆಜ್ಞೆಯನ್ನುಲ್ಲಂಘಿಸಿದವರು ಪರದೇಶದಲ್ಲಿಯೆ ಇರ್ದುಕೊಂಡರೆ ಗೆದ್ದುಕೊಂಡರು ಇಲ್ಲದೆ ಸ್ವದೇಶಕ್ಕೆ ಕಾಲಿಟ್ಟರೆ ಅವರಿಗೆ ಸಮೂಜ ಬಹಿಷ್ಕಾರವನ್ನು ಹಾಕಲಾಗುತ್ತದೆಯಂತೆ.

—೦೦೦—

ಮಾಂಸಾಹಾರಿ ಸಸ್ಯಗಳು.

ಸಸ್ಯವರ್ಗದಲ್ಲಿ ಅನೇಕ ಜಾತಿಗಳಿವೆ ಇವುಗಳಲ್ಲಿ ಕೆಲವು ಮಾಂಸಾಹಾರಿಗಳು. ತಮ್ಮ ನಿತ್ಯದ ಆಹಾರದೊಡನೆ ಸೆ ಮಾಂಸವನ್ನೂ ಸೇವಿಸುತ್ತವೆ. ಈ ತರದ ಸಸ್ಯಗಳು ನಮ್ಮ ದೇಶದಲ್ಲಿಯೂ ಇವೆ. ಅಮೇರಿಕಾ ಮತ್ತು ಚೀನಾ ದೇಶಗಳಲ್ಲಿ ಈ ತರದ ಗಿಡಗಳಿಗೆ ಹೂಜಿ ಗಿಡವೆಂದು ಕರೆಯುತ್ತಾರೆ.

ಇದಕ್ಕೆ ಹೂಜಿ ಆಕಾರದ ಎಲೆಗಳಿವೆಯಂತೆ. ಇದಕ್ಕೆ ಮುಚ್ಚಳದಂತಿರುವ ಬೇರೊಂದು ಎಲೆ ಇವೆ ಈ ಎಲೆಯಿಂದ ಯಾವಾಗಲೂ ಒಂದು ತರದ ಅಂಟು ವಸರುತ್ತಿರುತ್ತದೆ ಇದರ ವಾಸನೆಗೆ ಕೆಲವು ಕ್ರಿಮಿ-ಕೀಟಗಳು ಇದರ ಕಡೆಗೆ ಆಕರ್ಷಿಸಲ್ಪಟ್ಟು ಎಲೆಯ ಅಂಟಿನಲ್ಲಿ ಅವು ಸಿಕ್ಕಿಬೀಳುವುವು. ಹೀಗೆ ಸಿಕ್ಕಿಬಿದ್ದ ಕ್ರಿಮಿಗಳನ್ನು ಆ ಗಿಡವು ಜೀರ್ಣಮಾಡಿಕೊಂಡು ಆಹಾರವಾಗಿ ಉಪಯೋಗಿಸುವುದು.

ಮುತ್ತಿನ ಚಿಪ್ಪಿನಂತಿರುವ ಎಲೆಗಳಿಂದ ಕೂಡಿದ ಗಿಡವು ಕೆರೋಲಿನಾವೆಂಬಲ್ಲಿದೆ. ಈ ಎಲೆಗೆ ಮುಚ್ಚಳಗಳಿವೆ ಈ ಮುಚ್ಚಳದ ಬದಿಗಳಲ್ಲಿ ಮುಳ್ಳುಗಳು ಸಾಲುಸಾಲಾಗಿವೆ. ಇದರ ಮೇಲೆ ಯಾವುದಾದರೊಂದು ಹುಳುವು ಕೂತರೆ ಸರಿ, ಕೂಡಲೇ ಎಲೆಯು ಮುಚ್ಚಿಕೊಳ್ಳುವುದು. ಗಿಡವು ಆ ಹುಳುವನ್ನು ನುಂಗಿಕೊಳ್ಳುವುದು ಹುಳುವು ಸಂಪೂರ್ಣವಾಗಿ ಜೀರ್ಣವಾದ ಮೇಲೆ ಎಲೆಯು ಬಾಯಿಬಿಡುವುದಿಲ್ಲ.

ಹೀಗೆಯೇ ತರತರದ ವಿಧಗಳಲ್ಲಿ ಗಾಳಿಯಲ್ಲಿ ಸಂಚರಿಸುವ ಕ್ರಿಮಿಕೀಟಗಳನ್ನು ಉಪಾಯದಿಂದ ಹಿಡಿದುಕೊಂಡು ಜೀವಿಸುವ ಅನೇಕ ಸಸ್ಯಗಳಿವೆ. ಮೃಗಗಳನ್ನೂ ಹಿಡಿದು ಜೀವಿಸುವ ವೃಕ್ಷಗಳಿವೆಯಂತೆ.

—೦೦೦—

ಕುಲಗೋತ್ರ ಇಲ್ಲದ ಮುಕ್ಕಳು.

ಜರ್ಮನಿಯಲ್ಲಿ ಸುಮಾರು ೧,೪೦೦,೦೦೦ ಮಕ್ಕಳು ಕುಲಗೋತ್ರ ಇಲ್ಲದವರಾಗಿದ್ದಾರೆ. ಇವರಿಗೆ ಇತರ ಮಕ್ಕಳಂತೆಯೇ ಸ್ಥಾನವೂನ ಕೊಡುವುದಕ್ಕೆ ನಾಜಿ ಪಕ್ಷದವರು ಹೊಸದೊಂದು ಶಾಸನ ಮಾಡುವವರಿದ್ದಾರೆ.

—೦೦೦—

ಬ್ರಿಟಿಷ್ ಹುಡುಗರಿಗೆ ಹಾಲು.

ಇಂಗ್ಲೆಂಡಿನಲ್ಲಿ ೩೦೦,೦೦೦ ಶಾಲಾ ಮಕ್ಕಳಿಗೆ ಪ್ರತಿದಿನವೂ ಕುಡಿಯುವುದಕ್ಕೆ ಹಾಲು ಕೊಡುವರು. ಹೀಗೆ ಕೊಡುವ ಹುಡುಗರು ವರ್ಷಕ್ಕೆ ೨೨,೫೦೦,೦೦೦ ಗ್ಯಾಲನ್ ಕುಡಿಯುತ್ತಾರೆ. ೪,೦೦೦,೦೦೦ ಗ್ಯಾಲನ್ ಹಾಲು ಧರ್ಮಾರ್ಥವಾಗಿ ಹಂಚಲ್ಪಡುತ್ತದೆ ನಮ್ಮಲ್ಲಿಯೂದರೋ?

—೦೦೦—

ಮರದಿಂದ ಎಲ್ಲ ವಸ್ತುಗಳನ್ನೂ ತಯಾರಿಸಬಹುದು.

ಜರ್ಮನಿಯ ಶಾಸ್ತ್ರಜ್ಞರ ಹೇಳಿಕೆ.

ಹಿಟ್ಲರರು ಮರದ ಸಹಾಯದಿಂದ ಲೋಕವನ್ನೇ ಇವರಿಸಲು ಬಲ್ಲರಂತೆ! ಅಂತರ ರಾಷ್ಟ್ರೀಯ ಟಿಂಬರ್ (ಮರಗಳ) ಕಾನ್‌ಫರೆನ್ಸಿನಲ್ಲಿ ಜರ್ಮನಿಯ ವಿಜ್ಞಾನ ಶಾಸ್ತ್ರಜ್ಞರೊಬ್ಬರು ತಾವು ಕಂಡು ಹಿಡಿದ ಹಲವು ವಿಷಯಗಳನ್ನು ತಿಳಿಸಿದರು.

ಈ ಶಾಸ್ತ್ರಜ್ಞರು ಡಾ ಬೆರ್ಗಿಯಸ್ ಎಂಬವರು. ಇವರು ಕೆಲವು ವರ್ಷಗಳ ಹಿಂದೆ ನೊಬೆಲ್ ಪಾರಿತೋಷಕವನ್ನು ಪಡೆದಿದ್ದರು. ಇತ್ತೀಚೆಗೆ ಇವರು ಅನೇಕ ಶೋಧನೆಗಳನ್ನು ನಡೆಸಿ ಮನುಷ್ಯನಿಗೆ ಉಪಯೋಗಕ್ಕೆ ಬರುವ ಎಲ್ಲ ವಸ್ತುಗಳನ್ನೂ ಮರದಿಂದ ತಯಾರಿಸಬಹುದೆಂದು ಹೇಳುತ್ತಾರೆ.

ಕಲ್ಲಿದ್ದಲಿನಿಂದ ಪೆಟ್ರೋಲು.

ಕೆಲವು ವರ್ಷಗಳ ಹಿಂದೆ ಇವರು ಕಲ್ಲಿದ್ದಲಿನಿಂದ ಎಣ್ಣೆಯನ್ನು ತೆಗೆಯುವ ವಿಧಾನವನ್ನು ಕಂಡು ಹಿಡಿದರು. ಈಗ ಜರ್ಮನಿಯಲ್ಲಿ ವರ್ಷಂಪ್ರತಿ ೨೨೦೦೦,೦೦೦ ಗ್ಯಾಲನ್ ಪೆಟ್ರೋಲು ಈ ವಿಧಾನದಿಂದ ತಯಾರಿಸಲ್ಪಡುವುದು. ಜರ್ಮನಿಗೆ ಬೇಕಾದ ಎಣ್ಣೆಯನ್ನು ದೇಶದಲ್ಲಿ ತಯಾರುಮಾಡಿಕೊಳ್ಳುವಷ್ಟು ಶಕ್ತಿಯು ಜರ್ಮನಿಯಲ್ಲಿರುವುದು.

ಮಾನವನಿಗೆ ಬೇಕಾದುದನ್ನು ತಯಾರಿಸಬಹುದು

ಮಾನವನ ಸುಖಜೀವನಕ್ಕೆ ಬೇಕಾದ ಯಾವ ವಸ್ತುವನ್ನೂ ಮರದಿಂದ ತಯಾರಿಸಬಹುದು ಅಲ್ಪ ಗಣನೆಯ ಒಂದು ಮರದ ತುಂಡಿನಿಂದ ಆ ತುಂಡಿನ ಮೂರನೆ ಎರಡು ಭಾಗದಷ್ಟು ಪ್ರಮಾಣದ ಸಕ್ಕರೆಯನ್ನು ಪಡೆಯಬಹುದು. ಒಂದು ರಾತಲು ತೂಕ ಈ ಸಕ್ಕರೆಯು ಒಂದು ರಾತಲು ಬಾರ್ಲಿಯಷ್ಟು ಫಲವನ್ನು ಹೊಂದಿರುವುದು.

ಮರದಿಂದ ಸಿಡಿಮದ್ದು.

ಮರದ ಸಕ್ಕರೆಯಿಂದ ಬೇರೆ ಅನೇಕ ಪದಾರ್ಥಗಳನು ತಯಾರಿಸಬಹುದಂತೆ. ಸಿಡಿಮದ್ದಿನ ತಯಾರಿಗೆ ಬೇಕಾದ ಹಲವು ಪದಾರ್ಥಗಳನ್ನು ಮರದಿಂದ ಪಡೆಯಬಹುದು.

ಆಹಾರ ಸಾಮಗ್ರಿ.

ಮರದಿಂದ ಬೇಕಾದಷ್ಟು ಆಹಾರ ಸಾಮಗ್ರಿಗಳನ್ನು ತಯಾರಿಸಬಹುದು ಜರ್ಮನಿಯನ್ನು ಶತ್ರುಗಳು ಬಂದು ಮುತ್ತಿದರೆ ದೇಶಕ್ಕೆ ಬೇಕಾದಷ್ಟು ಆಹಾರ ಪದಾರ್ಥಗಳನ್ನು ಮರದಿಂದಲೇ ಸಂಗ್ರಹಿಸುವರಂತೆ ಇನ್ನಲ್ಲದೆ ಇದರಿಂದ ಗ್ಯಾಸನ್ನು ಸಹ ಪಡೆಯಬಹುದಂತೆ.

ಮರದಿಂದ ರೇಶ್ಮೆ.

ಮರದಿಂದ ಉತ್ತಮ ತರದ ಕೃತಕ ರೇಶ್ಮೆಯನ್ನು ತಯಾರು ಮಾಡುವುದಕ್ಕೆ ಸಾಧ್ಯವಿದೆ.

ಖನಿಜಗಳು.

ತಾವು ಪ್ರಕೃತ ಮುಖ್ಯವಾದ ಖನಿಜಗಳನ್ನು ಕಂಡು ಹಿಡಿಯುವ ಕೆಲಸದಲ್ಲಿ ಶೋಧನೆ ಮಾಡುತ್ತಿರುವುದಾಗಿ ಡಾ ಬರ್ಗಿಯಸ್‌ರವರು ಹೇಳಿದರು. ಜರ್ಮನಿಯಲ್ಲಿ ಕಡಿಮೆಯಾಗಿರುವ ನಿಕ್ಕಲ್, ತಾಮ್ರ ಮೊದಲಾದ ವಸ್ತುಗಳ ಬದಲಿಗೆ ಬೇಕಾದ ಖನಿಜಗಳನ್ನು ಹುಡುಕುವುದು ತಮ್ಮ ಈಗಿನ ಉದ್ದೇಶವೆಂದರು.

ಲೋಕವನ್ನೇ ಇದಿರಿಸಬಹುದು.

ಇದರಲ್ಲಿ ತಾವು ಜಯಶೀಲರಾದರೆ ಜರ್ಮನಿಗೆ ಮುಂದಕ್ಕೆ ಭಯವೇ ಇಲ್ಲ. ಯಾವ ದೇಶದವರು ಎಷ್ಟೆಷ್ಟು ತರದಲ್ಲಿ ಪ್ರತಿಕ್ರಿಯೆಗಳನ್ನು ಹಾಕಿದರೂ ಜರ್ಮನಿಯು ಹೆದರುವಂತಿಲ್ಲ.

—೦೦೦—

ನೇಮಿಯರ್ ವರದಿ.

- ಎಲ್ಲಾ ಪ್ರಾಂತಗಳಿಗೂ ಧನ ಸಹಾಯ.

ಕೊಡಗಿನ ಮಾತೇ ಇಲ್ಲ.

ಪ್ರಾಂತೀಕ ಜವಾಬ್ದಾರಿ ಸರಕಾರ ಪದ್ಧತಿಯ ಅನುಸರಣೆಗೆ ಮೊದಲು ನಾನಾ ಸಿದ್ಧತೆಗಳಾಗಬೇಕಾಗಿದೆಯಷ್ಟೆ. ಇದಕ್ಕಾಗಿ ಆಗಿಂದಾಗ್ಗೆ ಕೆಲವು ತಜ್ಞರಿಂದ ಕೂಡಿದ ಒಂದೊಂದು ಸಮಿತಿಗಳನ್ನು ಇಂಡಿಯಾ ಸರಕಾರದವು ನೇಮಿಸಿದರು. ಚುನಾವಣಾ ಕ್ಷೇತ್ರಗಳನು ವಿಭಜಿಸಿ ಅವುಗಳನ್ನು ಕುರಿತು ವರದಿಯ ನ್ನೊಪ್ಪಿಸಲು 'ಹ್ಯಾಮಂಡ್' ಕಮಿಟಿಯೊಂದು ನೇಮಿಸಲಾಗಿತ್ತು. ಮುಂದಿನ ರಾಜ್ಯಾಂಗ ರಚನೆಯಲ್ಲಿ ಪ್ರಾಂತಗಳಿಗೂ ಕೇಂದ್ರ ಸರಕಾರಕ್ಕೂ ಇರಬೇಕಾದ ಹಣ ಕಾಸಿನ ವ್ಯವಸ್ಥೆಯನ್ನು ಕುರಿತು ವರದಿ ನ್ನೊಪ್ಪಿಸಲು 'ಸರ್' ಓಟೊ ನೀಮಿಯರ್'ರವರ ಅಧ್ಯಕ್ಷತೆಯಲ್ಲಿ ನಿಯಮಿತವಾಗಿದ್ದ ಸಮಿತಿಯೊಂದು ಎಲ್ಲಾ ಪ್ರಾಂತಗಳ ಸರಕಾರದೊಡನೆ ಮೂರು ಕಥೆ ನಡೆಸಿ ಈ ಕೆಳಗೆ ಕಂಡಂತೆ ತಮ್ಮ ವರದಿಯನ್ನು ಒಪ್ಪಿಸಿರುವರು.

ಒಟ್ಟಿನಲ್ಲಿ, ಎಲ್ಲವೂ ಸುಸೂತ್ರವಾಗಿ ಸಾಗಿದರೆ ಪ್ರಾಂತೀಕ ಸುಧಾರಣೆಗಳನ್ನು ಆಚರಣೆಗೆ ತರಲು ಭಾರತ ಸರಕಾರದ ಹಣ ಕಾಸಿನ ಪರಿಸ್ಥಿತಿಯು ಸರಿಯಾಗಿರುವಂತೆ ಅವರು ಅಭಿಪ್ರಾಯ ಪಡುತ್ತಾರೆ. ಭಾರತದಲ್ಲಿರುವ 11 ಪ್ರಾಂತ್ಯಗಳಿಗೆ ಕೇಂದ್ರ ಸರಕಾರವು 2 ಕೋಟಿ ರೂ. ಗಳ ದ್ರವ್ಯ ಸಹಾಯ ಮಾಡಬೇಕೆಂದು ಅವರು ಅಭಿಪ್ರಾಯಪಡುತ್ತಾರೆ. ಪ್ರಾಂತ್ಯಗಳಿಗೆ ಕೂಡಬೇಕಾಗುವ 6 ಕೋಟಿ ರೂ. ಗಳ ವಂಚನೆಯ ತೆರಿಗೆಯನ್ನು ಮೊದಲು 5 ವರ್ಷಗಳ ಕಾಲ ಕೇಂದ್ರ ಸರಕಾರವೇ ಇಟ್ಟುಕೊಂಡಿರಬೇಕು; ಒಂದು ವೇಳೆ ಅಷ್ಟರಲ್ಲಿ ರೈಲ್ವೆ ಆದಾಯವು ಹೆಚ್ಚಿದರೆ, ಪ್ರಾಂತ್ಯಗಳಿಗೆ ಆ ಹಣವನ್ನು ಕ್ರಮ ಕ್ರಮವಾಗಿ ಕೊಡುತ್ತಾ ಬರಬೇಕು; ಸುಧಾರಣೆಗಳು ಆಚರಣೆಗೆ ಒಂದ 10 ವರ್ಷಗಳ ನಂತರ ಸ್ವತಂತ್ರವಾಗುವ ಪ್ರಾಂತ್ಯಗಳು ಈ ಬಾಬಿನ ಹಣವನ್ನು ಸಂಪೂರ್ಣವಾಗಿ ಅನುಭವಿಸಬೇಕೆಂದು ಸರ್ ನೇಮಿಯರ್'ರವರು ಸಲಹೆ ಕೊಟ್ಟಿರುತ್ತಾರೆ.

ಪ್ರಾಂತೀಯ ಸುಧಾರಣೆಗಳು ಆಚರಣೆಗೆ ಬಂದ ಮೇಲೆ ಕೇಂದ್ರ ಸರಕಾರವು ಪ್ರಾಂತೀಯ ಸರಕಾರಗಳಿಗೆ ಕೊಡಬೇಕಾದ ದ್ರವ್ಯ ಸಹಾಯವನ್ನು ಅವರು ಮೂರು ಒಗೆಯೂಗಿ ಏರಿಸುತ್ತಾರೆ. ಪ್ರತ್ಯಕ್ಷವಾಗಿ ದ್ರವ್ಯ ಸಹಾಯವನ್ನು ನೀಡುವುದೊಂದು ಒಗೆ. 1936 ನೆಯ ಏಪ್ರಿಲ್ ತಿಂಗಳ ಹಿಂದೆ ಪ್ರಾಂತೀಯ ಸರಕಾರಗಳು ಮಾಡಿರುವ ಸಾಲಗಳನ್ನು ರದ್ದು ಪಡಿಸುವುದು ಮತ್ತೊಂದು ಒಗೆ. ಸಣಬಿನ ತೆರಿಗೆಯಲ್ಲಿ ಶೇಕಡ 12½ ಯಷ್ಟು ಪೊಲಗನ್ನು ಆಯಾ ಪ್ರಾಂತ್ಯಗಳಿಗೆ ಬಟ್ಟು ಕೊಡುವುದು ಕಡೆಯ ವಿಧಾನ.

ಮುಂದಿನ ಪ್ರಾಂತ್ಯ ಸರಕಾರಗಳಿಗೆ ಕೇಂದ್ರ ಸರಕಾರದಿಂದ ಪ್ರಾಂತಿಕ ಸ್ವರಾಜ್ಯ ಸ್ಥೆಯ ಕಾಲದಲ್ಲಿ ಇಷ್ಟು ದ್ರವ್ಯ ವಾರ್ಷಿಕ ವಂಚನೆಯ ರೂಪದಲ್ಲಿ ದೊರಕುವುದು.

ಪ್ರಾಂತ್ಯಗಳು		ದ್ರವ್ಯ
ಬಂಗಾಳ	ರೂ....೭೫	ಲಕ್ಷ
ಬಿಹಾರ	೨೫	,,
ಮಧ್ಯ ಪ್ರಾಂತ	೧೫	,,
ಅಸ್ಸಾಂ	೪೫	,,
ಗಡಿನಾಡು	೧೧೦	,,
ಒರಿಸ್ಸ	೫೦	,,
ಸಿಂಧ್	೧೦೫	,,
ಆಗ್ರ ಅಯೋಧ್ಯ	೨೫	,,

ಪ್ರಾಂತೀಯ ಸುಧಾರಣೆಗಳು ಒಂದೊಡನೆಯೆ, ಈ ಪ್ರಾಂತ್ಯಗಳ ಪೈಕಿ, ಅಯೋಧ್ಯೆಗೆ ಪ್ರತಿ ವರ್ಷವೂ ೨೫ ಲಕ್ಷ, ಅಸ್ಸಾಮಿಗೆ ೫೦ ಲಕ್ಷ, ಒರಿಸ್ಸಕ್ಕೆ ೪೦ ಲಕ್ಷ, ಗಡಿನಾಡಿಗೆ ೧ ಕೋಟಿ ರೂಪಾಯಿಗಳಂತೆ ೫ ವರ್ಷಗಳ ಕಾಲದ ವರೆಗೂ ಸಿಂಧ್ ಪ್ರಾಂತ್ಯಕ್ಕೆ ವರ್ಷಂಪ್ರತಿ ೧೫ ಲಕ್ಷ ರೂಪಾಯಿಗಳಂತೆ ೧೦ ವರ್ಷಗಳ ಕಾಲದ ವರೆಗೂ ಪ್ರತ್ಯೇಕ ಸಹಾಯವೂ ಕೊಡಲಾಗುವದು. ಅನಂತರ ಕೂಡುವುದನ್ನೂ, ಬಿಡುವುದನ್ನೂ ಪರಿಶೀಲಿಸಿ ಮುಂದಿನ ಸಹಾಯ ನಿಶ್ಚಯಿಸಲಾಗುವದು. ಹೀಗೆ ಹೆಚ್ಚಿನ ವಿನಿಯೋಗ ಮಾಡುವುದರಿಂದ ಕೇಂದ್ರ ಸರಕಾರಕ್ಕೆ ಪ್ರತಿ ವರ್ಷವೂ ೧೯೨ ಲಕ್ಷ ರೂಗಳ ಹೆಚ್ಚು ಮುಟ್ಟುತ್ತದೆ. ಪ್ರಾಂತ್ಯಗಳಲ್ಲಿ ಸ್ವತಂತ್ರ್ಯ ಸರಕಾರಗಳೇರ್ಪಟ್ಟ ಮೇಲೆ ಒರಿಸಕ್ಕೆ ೧೯ ಲಕ್ಷಗಳನ್ನೂ, ಸಿಂಧಿಗೆ ೫ ಲಕ್ಷ ರೂಗಳನ್ನೂ ಒಮ್ಮೆಲೇ ಕೊಟ್ಟು ಬಿಡಬೇಕು.

ವರಮಾನ ತೆರಿಗೆಯನ್ನು (Income-Tax) ಕೇಂದ್ರ ಸರಕಾರವು ಪ್ರಾಂತೀಯ ಸರಕಾರಗಳಿಗೆ ಈ ರೀತಿ ಹಂಚಬೇಕೆಂದು ಸರ್ ನೇಮಿಯರ್'ರವರು ಸಲಹೆ ಕೊಡುತ್ತಾರೆ.

ಪ್ರಾಂತ್ಯ	ಶೇಕಡ
ಮದರಾಸು	೧೫
ಮುಂಬೈ	೨೦
ಬಂಗಾಳ	೨೦
ಆಗ್ರ ಅಯೋಧ್ಯ	೧೫
ಪಂಜಾಬು	೮
ಬಿಹಾರ್	೧೦
ಮಧ್ಯ ಪ್ರಾಂತ್ಯ	೫
ಅಸ್ಸಾಂ	೨
ಗಡಿನಾಡು	೧
ಒರಿಸ್ಸ	೨
ಸಿಂಧ್	೩

ಹೀಗೆ ಹಂಚಬೇಕಾಗಿರುವ ವರಮಾನ ತೆರಿಗೆಯಲ್ಲಿ ಶೇಕಡ ೫೦ ರಷ್ಟು ಭಾಗವನ್ನು ಸುಧ್ಧದ ಏಳು ವರ್ಷಗಳಲ್ಲಿ ಕೇಂದ್ರ ಸರಕಾರವೇ ಹಂಚಬೇಕೆಂದು ಸರ್ ಒಟ್ಟಿನವರು ಅಭಿಪ್ರಾಯ ಪಟ್ಟಿದ್ದಾರೆ.

ರೈಲ್ವೆಗಳ ಮೂತಿಗೆ ಒಂದು ಅವರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ 'ರೈಲ್ವೆಗಳು ಪರಿಸ್ಥಿತಿ ಚಿಂತಾಜನಕವಾಗಿದೆ. ಅಂದರೆ ಮುಂದಿನ ಐದು ವರ್ಷಗಳಲ್ಲಿ ರೈಲ್ವೆಗಳ ಆದಾಯ ಕಿಂತ ವೆಚ್ಚವೇ ಹೆಚ್ಚುತ್ತದೆಂದು ನಿರೀಕ್ಷಿಸಬೇಕಾಗಿಲ್ಲ ಆದರೆ ರೈಲ್ವೆಗಳ ಆದಾಯದಿಂದ ಲಾಭ ಹೊಂದಬೇಕೆಂದು ತವಕ ಪಡುತ್ತಿರುವ ಪ್ರಾಂತ್ಯಗಳಿಗೆ ರೈಲ್ವೆಗಳಿಂದಾಗುತ್ತಿರುವ ಕಷ್ಟನಷ್ಟಗಳನ್ನು ಗಮನಕ್ಕೆ ತಂದುಕೊಳ್ಳಬೇಕು.

'ಆದುದರಿಂದ ದೇಶದಲ್ಲಿರುವ ನಾನಾ ಬಗೆಯ ಪ್ರಯೂಣ ಸೌಕರ್ಯಗಳ ವಿಚಾರದ ಪರಿಶೀಲನೆ ಮಾಡಿ ಒಂದು ಬಗೆಯ ಬಿಗಿಯನ್ನು ತರುವುದಲ್ಲದೆ, ರೈಲ್ವೆಯ ವೆಚ್ಚವನ್ನೂ ಹತೋಟಿಗೆ ತಂದುಕೊಳ್ಳುವುದು ಮುಖ್ಯವಾದ ಕರ್ತವ್ಯವಾಗಿದೆ.'

ನಾರ್ವೆಯಲ್ಲಿನ ಹೆಂಗಸರು.

ನಾರ್ವೆಯು ಯುರೋಪಿನ ವಾಯವ್ಯ ಮೂಲೆಯಲ್ಲಿದೆ. ಅಲ್ಲಿನ ಹೆಂಗಸರನ್ನು ಲೋಕೋತ್ತರರೆಂದು ಧಾರಾಳವಾಗಿ ಕರೆಯಬಹುದು. ಅವರೇ ಆದರ್ಶಪ್ರಾಯರಾದ ಮಾನವ ಕುಲೋದ್ಧಾರಕರು, ಕರ್ಮಯೋಗಿನಿಯರು.

ನಾರ್ವೆಯ ಹಳ್ಳಿಗಾಡಿನ ಸ್ತ್ರೀಯರ ಸಂಘವೆಂಬ ಸಂಸ್ಥೆಯೊಂದಿದೆ ಅದು ಸ್ಥಾಪಿತವಾಗಿ ೧೪ ವರ್ಷಗಳಾದವು. ಹಳ್ಳಿಗಾಡಿನ ಸ್ತ್ರೀಯರು ಒಟ್ಟುಗೂಡಿ ರೈತರ ಮತ್ತು ಅವರ ವೃತ್ತಿಯ ಅಭ್ಯುದಯಕ್ಕಾಗಿ ದುಡಿಯಬೇಕೆಂದು ಏಕಧ್ಯೇಯದಿಂದ ಅವರು ಆ ಸಂಘವನ್ನು ಸ್ಥಾಪಿಸಿದರು. ಈ ಹದಿನಾಲ್ಕು ವರ್ಷಗಳ ಅಖಂಡ ಕಾಲದಲ್ಲಿ ಅವರು ತಮ್ಮ ಧ್ಯೇಯ ಸಾಧನೆಯಲ್ಲಿ ನಿಶ್ಚಲರಾಗಿ ನಿರತರಾಗಿದ್ದಾರೆ. ಪ್ರಚಾರ ಪ್ರಖ್ಯಾತಿಗಳನ್ನು ಇಂದಿಗೂ ಹಿಂದೆಂದೂ ಬಯಸಿರಲಿಲ್ಲ.

ಆ ಸಂಘದ ಸದಸ್ಯರೆಲ್ಲರೂ ರೈತರ ಹೆಂಡತಿಯರು ಮಕ್ಕಳು. ಅವರ ಕೆಲಸವೇನೆಂದರೆ ಬಿಡುವು ಕಾಲದಲ್ಲಿ ಒಟ್ಟುಗೂಡಿ ಯಾವ ಯಾವ ರೈತರು ಏನೇನು ಕಷ್ಟ ನಷ್ಟಗಳನ್ನು ಅನುಭವಿಸುತ್ತಿದ್ದಾರೆ; ಅವುಗಳನ್ನು ನಿವಾರಿಸಲು ತಮ್ಮಿಂದ ಸಾಧ್ಯವೆ, ಸಾಧ್ಯವಾಗಿದ್ದರೆ ಯಾವ ರೀತಿ ಕೆಲಸ ಮಾಡಬೇಕು. ಇತ್ಯಾದಿಗಳನ್ನು ತಮ್ಮಲ್ಲೇ ಇತ್ಯರ್ಥ ಮಾಡಿಕೊಂಡು ಕೆಲಸಕ್ಕೆ ತೊಡಗುತ್ತಾರೆ. ಹಳ್ಳಿಗಾಡಿನವರೂ ದೇಶದ ಜೀವನದಲ್ಲಿ ಎಷ್ಟು ಪ್ರಾಮುಖ್ಯವಾದ ಪಾತ್ರವನ್ನು ವಹಿಸುವರೆಂಬುದನ್ನು ರೈತರಿಗೆ ಮನಗಾಣಿಸಲು ಆಗಾಗ್ಗೆ ವಸ್ತು ಪ್ರದರ್ಶನಗಳನ್ನು ಏರ್ಪಡಿಸುವುದು ತಪ್ಪದೆ ಕಾಡಿಕೆ ಇತ್ಯಾದಿ ಮನೆ ಹಾಳು ಚಾಳಿಗಳಿಗೆ ಬಿದ್ದು ತಮ್ಮ ರೈತರು ನಾಶವಾಗದಿರಲೆಂದು ಪಾನನಿರೋಧ ನೀತಿಯನ್ನು ತಮ್ಮ ಮಕ್ಕಳಿಗೆ ಕಲಿಸುತ್ತಾರೆ.

ಆದರೆ ನಾರ್ವೀಜಿಯನ್ ಸ್ತ್ರೀಯರಿಗೆ ಒಂದು ನ್ಯೂನತೆಯನ್ನು ದೇವರು ಕೊಟ್ಟಿದ್ದಾನೆ ಅವರು ಕೆಲಸಗಾರರೇ ವಿನಾ ಮಾತುಗಾರರಲ್ಲ! ಬಹುಜನ ಸಭೆಗಳಲ್ಲಿ ಅವರು ಭಾಗವಹಿಸುವುದೇ ಅಪರೂಪ. ಬಹಳ ಸಭಾಕಂಪ ಅತಿ ಸಂಕೋಚ. ಆದರೂ ಆ ದೇಶದ ಜೀವನದಲ್ಲಿ ಅವರ ಪ್ರಭಾವವು ಅಗಾಧವಾಗಿದೆ ಮೂರ್ಖ ತಪ್ಪಿ ಹೋಗುವ ಗುಂಡಿಪಾಲನ್ನು ಅವರು ತಡೆಯುತ್ತಾರೆ ಅವರು ದೇಶೋಪಕಾರಿಗಳಾಗಿದ್ದಾರೆ ಅಲ್ಲಿನ ಆಡಳಿತದಲ್ಲಿ ಅವರು ಪ್ರತ್ಯಕ್ಷವಾಗಿ ಭಾಗವಹಿಸುವುದಿಲ್ಲ. ಆದರೆ ಕೆಡಕು ಮಾಡುವ ಎಲ್ಲ ಶಕ್ತಿಗಳನ್ನು ಕೇವಲ ಬಾಯಿಮಾತಿನಿಂದ ತೊಡೆದು ಹಾಕುತ್ತಾರೆ. ತಮ್ಮ ಮೂತಿಗೆ ಅಷ್ಟು ಗಾರವನ್ನೂ ಇಟ್ಟುಕೊಂಡಿದ್ದಾರೆ.

---

೧೫೦ ದಿನಗಳ ಉಪವಾಸ.

ಬಂಗಾಳದ ಕೃಷ್ಣಗರ ಜೈಲಲ್ಲಿ ಡಿಟೆನ್ಯೂ ಕೈದಿಗಳಾಗಿರುವ ಶ್ರೀ. ಪ್ರಫುಲ್ಲ ನಾರಾಯಣ ಮಲ್ಲಿಕರು 150 ದಿನಗಳಿಂದ ಉಪವಾಸ ದೀಕ್ಷೆ ಹಿಡಿದು ಅವರ ಪರಿಸ್ಥಿತಿಯು ವಿಷಮವಾಗಿರುವುದು. ಪಂಡಿತ ಜವಾಹರಲಾಲರು ಉಪವಾಸ ನಿಲ್ಲಿಸಬೇಕೆಂದು ತಂತಿ ಮೂಲಕ ತಿಳಿಸಿರುವರು.

ಸಮರ್ಪಕ ಆಡಳಿತದಿಂದ, ಕಡಿಮೆಯೂದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ ಭಾರತ ವಿವೂರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯು, ನಿಮ್ಮ ಒಲುಮೆಯು ಈ ಸಂಸ್ಥೆಯಲಿ ತಪ್ಪದೆ ವಿನಿಯುನ್ನಿಳಿಸಿ.

ಮೊದಲಬೇ 5 ವರ್ಷಗಳ ಮೌಲ್ಯಪೇತನದ ಫಲಿತಾಂಶನಾಗಿ ಪ್ರತಿಯೊಂದು 1000 ರೂಪಾಯಿಗಳ ವಿಮೂಪತ್ರದ ಮೇಲಿ,—

ವರ್ಷ 1ರ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಾಚಿದ ಹಿಂದೀ ವಿಮೂಕಂಪೆನಿಗಳು ಅತಿ ವಿರಳವೆಂಬುದನ್ನು ಮರೆಯದಿರಿ.)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಳಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (52—12)

ಸುಂಟಿಕೊಪ್ಪ ಏಜಂಟರು—
ಏ. ಎಸ್. ಮೂಚಯ್ಯನವರು,
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಕೊಡಗು

ಮೇ ತಾ ೧೩ನೇ ಶುಕ್ರವಾರ ೧೯೫೬.

ಭಾರತ ಭೂಮಿಯ ಅಪಾರ ನಷ್ಟ.

ಭಾರತ ಭೂಮಿಯ ದೌರ್ಭಾಗ್ಯವನ್ನು ವರ್ಣಿಸಲಸದಳವಾಗಿದೆ. ಅದಕ್ಕೆ ಒಂದರ ನಂತರ ಒಂದು ವಿಪತ್ತುಗಳು ಸಂಭವಿಸುತ್ತಲೇ ಇವೆ. ಈಗ ಕೆಲವು ವರ್ಷಗಳಿಂದ ಹಿಂದೂ ಮಾತೆಯ ಧೀರ ಪುರುಷರೇನೆಕರು ಅನೀರೀಕ್ಷಿತವಾಗಿ ಭೂಕಬಳಿಕೆಯ ಮೂಕಭೂಮಿಯ ಸೇವೆಯನ್ನು ಬಿಟ್ಟು ಪರಲೋಕವನ್ನೈದಿರುವರು. ಮೊನ್ನೆತಾನೇ ತನ್ನ ಓರ್ವ ವಿಖ್ಯಾತ ವೀರ ಪುತ್ರಿಯೂದ ಶ್ರೀಮತಿ ಕಮಲಾನಹರಿಂರವರನ್ನ ಕಳೆದುಕೊಂಡು ಕಂಬನೀರು ಒಣಗುವಷ್ಟರಲ್ಲೇ ಇನ್ನೊಬ್ಬ ಅದ್ವಿತೀಯ ದೇಶ ಸೇವಕರ ಅಗಲುವಿಕೆಯ ದುಃಖದಲ್ಲಿ ಮುಳುಗಬೇಕಾಯಿತು, ಭಾರತ ಮಾತೆಯು ತನ್ನ ಗರ್ಭಾವಗಿರಿಯ ಶೃಂಖಲೆಗಳನ್ನು ಬಿಡಿಸಿಕೊಂಡು ಪೂರ್ಣದ ಸ್ವಾತಂತ್ರ್ಯವನ್ನು ಪಡೆಯಲು ನಡೆಸುತ್ತಿರುವ ಹೋರಾಟದ ಈ ಬಿಕ್ಕಟ್ಟಿನ ಸಮಯಲ್ಲಿ ಇಂಥಾ ಕಷ್ಟಗಳಿಗೆ ಗುರಿಯಾಗುತ್ತಿರುವುದನ್ನು ನೋಡಿದರೆ ಅನಳ ಮೇಲೆ ಯಾರಿಗೆ ತಾನೇ ಕನಿಕರವೂ, ಸಂತಾಪವೂ ಹುಟ್ಟದೆ ಇರುವುದು. ಸ್ವಾತಂತ್ರ್ಯ ದೇಶಗಳಲ್ಲಿಯೇ ಇಂಥಾ ವಿಪತ್ತುಗಳು ಉಂಟಾದಲ್ಲಿ ಅವುಗಳನ್ನು ಸಹಿಸುವುದು ಕಷ್ಟವಾಗುವುದು. ಅದ ಮೇಲೆ ಹಿಂದೂ ದೇಶದ ಈಗಿನ ಸ್ಥಿತಿಯಲ್ಲಿ ಅಂಥವುಗಳನ್ನು ಅಗಿದಾಗ್ಯೆ ಆನ ಭವಿಸುವೆಂದರೆ ಸಾಧಾರಣವ ವಿಷಯವಲ್ಲ. ಆ ದುಃಖವೂ ನಷ್ಟವೂ ಇಷ್ಟೇ ಎಂದು ಹೇಳಲು ಯಾರಿಗೂ ಸಾಧ್ಯವಿಲ್ಲ.

ಹಿಂದೂ ದೇಶದ ಈಗಿನ ಅಥಾ ದುಃಖಕ್ಕೆ ಕಾರಣ ಡಾಕ್ಟರ್ ಯಂ. ಎ ಅನ್ಸಾರಿಯವರ ಅಕಾಲ ಮರಣ. ಇವರು ಈ ತಾ. 10ರ ಮಧ್ಯ ರಾತ್ರಿ ಮಸ್ಸೂರಿಯಿಂದ ಡೆಲ್ಲಿಗೆ ಹೋಗುತ್ತಿರುವಾಗೈ ರೈಲಿನಲ್ಲಿ ಟೈಫಸ್‌ನಲ್ಲಿಯೇ ಹೃದ್ರೋಗಕ್ಕೆ ತುತ್ತಾದರು. ಇವರ ಆರೋಗ್ಯವು ಕೆಲವು ವರ್ಷಗಳಿಂದಲೇ ಇತ್ತು ಮುಖವಾಗಿದ್ದರೂ ಇವರು ಇಷ್ಟು ಶೀಘ್ರದಲ್ಲಿ ಕಾಲವಶವನ್ನು ಬಯಸುವರೆಂದು ಯಾರೂ ನಿರೀಕ್ಷಿಸಿರಲಿಲ್ಲ. ಇವರು ಡಾಕ್ಟರಿ ವೃತ್ತಿಯಲ್ಲಿ ವಿಶೇಷ ಪಾಂಡಿತ್ಯವನ್ನೂ, ನೈಪುಣ್ಯವನ್ನೂ ಪಡೆದಿದ್ದರು. ಇವರು ಅಷ್ಟೇ ಒಡವರಿಗೆ ದಯಾಳುಗಳೂ, ಐಶ್ವರ್ಯವಂತರಿಗೆ ಸಜ್ಜನಿಕರೂ ಆಗಿದ್ದರು. ಯಾವಾಗಲೂ ಹಸನ್ಮುಖರಾಗಿದ್ದ ಇವರು ಬೇರೆಯವರಿಗೆ ಎಂದಿಗೂ ನೋವನ್ನುಂಟುಮಾಡುತ್ತಿರಲಿಲ್ಲ. ಉತ್ತಮ ತರದ ನಡತೆ ನೀತಿಯ ಗೃಹಸ್ಥರಾಗಿದ್ದರು. ರಾಜಕೀಯ ವಿಚಾರದಲ್ಲಾದರೋ ಇವರು ಅದ್ವೀತೀಯ ಮಂದಾಳಾಗಿದ್ದರು. ಹಿಂದೂ ಮುಸಲ್ಮಾನರೊಳಗೆ ಒಗ್ಗಟ್ಟನ್ನು ಸಾಧಿಸುವುದೇ ಇವರ ಜೀವನದ ಗುರಿಯಾಗಿತ್ತು. ಈ ವಿಚಾರದಲ್ಲಿ ಇವರು ತನ್ನ ಎಂದೂ ತಪ್ಪು ಮಾಡದ ಮಾರ್ಗದರ್ಶಕರಾಗಿದ್ದರೆಂದು ಮಹಾತ್ಮ ಗಾಂಧಿಯವರೇ ಹೇಳಿರುವಾಗ್ಯೆ ಇವರು ಈ ಉದ್ದಿಶ್ಯಕ್ಕಾಗಿ ಎಷ್ಟರ ಮಟ್ಟಿಗೆ ಶ್ರಮವಿಸುತ್ತಿದ್ದರೆಂಬುದನ್ನು ವ್ಯಕ್ತೀಕರಿಸಿ ಹೇಳಬೇಕಾಗಿಲ್ಲ. ಎಷ್ಟೇ ಕಷ್ಟದ ಪರಿಸ್ಥಿತಿಗಳ ಎದುರಾದರೂ ಇವರು ಶಾಂತತೆಯಿಂದಲೂ, ವಿವೇಚನೆಯಿಂದಲೂ ಅವುಗಳನ್ನು ಪರಿಹರಿಸುತ್ತಿದ್ದರು. ರಾಷ್ಟ್ರೀಯ ಪಕ್ಷದ ಮುಸಲ್ಮಾನರ ಪೈಕಿ ಇವರ ವೀಕಭಿಕ್ಷೆಯನ್ನು, ತ್ಯಾಗಬುದ್ಧಿಯನ್ನು ಮೆಚ್ಚುವವರು ಯಾರೂ ಈಗಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು ಯಾವ ಕಾರಣದಿಂದಲೇ ಆದರೂ ಇವರು ಸ್ವಪಕ್ಷೀಯರಿಂದಲೇ ಅಪಾರ ಟೀಕೆಗಳಿಗೆ ಗುರಿಯಾಗಬೇಕಾಯಿತು. ಆದರೂ ಇವರು ಸ್ಥಿರಚಿತ್ತರಾಗಿ, ನಿಶ್ಚಲ ಭಕ್ತಿಯಿಂದಲೂ, ಧೃಢನಿಶ್ಚಯದಿಂದಲೂ ನಡೆಸುತ್ತಿದ್ದರು. ಹಿಂದೂ ದೇಶದ ಯಾವ ಪ್ರಾಮುಖ್ಯ ದೇಶಕಾರ್ಯಗಳನ್ನು ನೋಡಿದರೂ ಅದರಲ್ಲಿ ಅವರ ಶ್ರಮದ ಗುರುತು ಇಲ್ಲದೆ ಇಲ್ಲ. ಅದರಿಂದಲೇ ಅವರು ಎಲ್ಲಾ ಪಾರ್ಟಿ ಗುಂಪುಗಳ ಜನರ ಪ್ರೀತಿಗೆ ಪಾತ್ರರಾಗಿದ್ದರು. ಕೋಮು ಸಾಮರಸ್ಯವನ್ನು ಇವರು ತನ್ನ ಶತ್ರುವೆಂದು ಎಣಿಸುತ್ತಿದ್ದರು ಈ ಕೋಮುವಾದಿತ್ವವು ಮಿಹ್ಮದೀಯ ಮತಕ್ಕೆ ವಿರುದ್ಧವಾದದ್ದು, ಇಂಡಿಯಾದ ಗುಲಾಮಗಿರಿಗೆ ಕಾರಣವಾದುದೂ ಎಂದು ಇವರು ನಂಬಿದ್ದರು.

ಇಂಥಾ ಅಸಾಧಾರಣ ವ್ಯಕ್ತಿಗಳು ಒಬ್ಬರ ಹಿಂದೊಬ್ಬರು ಭಾರತದ ಈ ಸಂದಿಗ್ಧಾವಸ್ಥೆಯಲ್ಲಿ ತೊಲಗುತ್ತಿರುವುದು ಭಾರತ ಮಾತೆಯ ದುರ್ದೆಶೆಯೆಂದೇ ಹೇಳಬೇಕಾಗಿದೆ. ಅದರಲ್ಲೂ ಇಂಥಾ ವ್ಯಕ್ತಿಗಳ ಸ್ಥಾನಕ್ಕೆ ಅರ್ಹರಾದವರೂ ಯಾರೂ ದೊರಕದಿರುವುದರಿಂದ ಭಾರತ ವಿಮೋಚನಾ ಕಾರ್ಯಕ್ಷೇತ್ರದಲ್ಲಿ ಒಂದೊಂದು ಸ್ಥಾನವು ಬರಿದಾಗಿ ಸಿಲ್ಲುವದಾಗಿದೆ.ಅದರ ಇಂಥಾ ವ್ಯಕ್ತಿಗಳ ನಷ್ಟ ಕೈಬಿಟ್ಟರೆಂದು ಹಿಂದುಳಿದ ನಾವುಗಳ ನಿರಾಶೆಯೂಗುವುದಲ್ಲಿ ಅರ್ಥವಿಲ್ಲ. ಯಾವ ಧ್ಯೇಯಕ್ಕಾಗಿ ಈ ಮಹಾ ವ್ಯಕ್ತಿಗಳು ತಮ್ಮ ತನು ಮನ ಧನವನ್ನು ಸವೆಸಿದರೋ ಆ ಧ್ಯೇಯಸಾಫಲ್ಯಕ್ಕಾಗಿ ಅವರು ಹಾಕಿ ಕೊಟ್ಟಿರುವ ಮೇಲ್ಪಂಕ್ತಿಯನ್ನು ನಾವು ಅನುಕರಿಸಿ ಅವರ ಉದ್ದೇಶವನ್ನು ನೆರವೇರಿಸಬೇಕಾಗಿದೆ ಇಂದು ನಾವುಗಳು ಅವರ ನಿಧನಕ್ಕಾಗಿ ವ್ಯಥೆಪಡುವ ಅವರ ಆತ್ಮಕ್ಕೆ ಶಾಂತಿಯನ್ನುವೆ ದೆಂದಾರೆ ಅವರು ಭಾರತ ಬಂಧನವಿಮೋಚನವನ್ನು ಹರಿಸೋದಿಸಲು ಉಳಿಹಚ್ಚಿರುವ ದೀವಿಟಿಗೆಯನ್ನು ಕೊಂಡಲು ಬಿಡದೆ ಆ ಕರ್ತವ್ಯವನ್ನು ಹರಿದಿಷ್ಠಾನಿಸಬೇಕು. ಇದೇ ನಾವು ನಮ್ಮ ಅಲ್ಲ ಸ್ಥಾನಗಳಲ್ಲಿ ಅವರ ದಿವ್ಯ ಆತ್ಮಕ್ಕೆ ಸಲ್ಲಿಸಬಹುದಾದ ಪ್ರಾರ್ಥನೆ. ಇದೇ ಅವರ ಆತ್ಮಕ್ಕೆ ಶಾಂತಿ

ನೇಮಿಯರ್ ವರದಿಯೂ ಕೊಡಗೂ.

ಸರ್ ಓಟೋ ನೇಮಿಯರ್ ಸಮಿತಿಯವರು ನಡೆಸಿದ ಆರ್ಥಿಕ ಪರಿಶೋಧನೆಯ ಸಾರಾಂಶವನ್ನು ಇನ್ನೊಂದೆಡೆಯಲಿ ಕೊಟ್ಟಿರುವೆವು. ಇದನ್ನು ನೋಡುವಾಗ ಅಭಾಗ್ಯ ಕೊಡಗು ಇನ್ನೂ ನಿರ್ಲಕ್ಷಿಸಲ್ಪಟ್ಟಿರುವ ಕ್ಲೇಶವು ಅಧಿಕವಾಗುವುದು ಕೊಡಗಿನ ಸ್ಥಿತಿಯು ಎಷ್ಟೋ ಹೀನವಾಗಿದ್ದರೂ, ಅದು ಕೇಂದ್ರ ಸರಕಾರದಿಂದ ಕಕ್ಷ ಸಹಾಯವನ್ನು ಪಡೆಯಲು ಎಷ್ಟೇ ಅರ್ಹತೆಯುಳ್ಳದಾಗಿದ್ದರೂ ಅದರ ಪ್ರಶ್ನೆಯು ಯಾವಾಗಲೂ ನಿರ್ಲಕ್ಷಿಸಲ್ಪಡುತ್ತಲಿದೆ. ಇದಕ್ಕೆ ಕಾರಣವಾದರೂ ಏನಿರಬಹುದೆಂದು ಊಹಿಸಲೂ ಕೂಡ ಈಗ ಸಾಧ್ಯವಿಲ್ಲದಾಗಿದೆ ನೂತನ ರಾಜ್ಯಾಂಗ ರಚನೆಯು ಇನ್ನು ಬೇಗನೆ ಬರಲಿಕ್ಕಿದೆ. ಕೊಡಗಿಗೆ ಈ ನೂತನ ರಾಜ್ಯಾಂಗ ರಚನೆಯಲ್ಲಿ ಎಂಥಾ ಸ್ಥಾನ ದೊರಕಿಸೆಂಬುದು ಎಲ್ಲರಿಗೂ ಚಿಂತೆಯ ವಿಷಯವಾಗಿದೆ. ಹಾಗೂ ಕೊಡಗಿಗೆ ಈಗಿರುವ ರಾಜ್ಯ ರಚನೆಯಲ್ಲಿ ಯಾವ ವಿಧದ ಸುಧಾರಣೆಯೂ ಕೊಡಲಾಗುವದಿಲ್ಲವೆಂದೇ ಭಾವಿಸಬೇಕಾಗಿದೆ. ಇರಲಿ, ಕೊಡಗಿನಲ್ಲಿ ಯಾವ ವಿಧದ ಪ್ರಜಾ ಹಿತಕಾರ್ಯವಾಗಬೇಕೆಂದರೆ—"ಹಣವಿಲ್ಲ" ಎಂಬ ಒಂದು ಗಿಳಿವಾಕ್ಯ ಉತ್ತರವು ಮೂಡುವಾಗಿದೆ. ಈಗ ಜಾರಿಯಲ್ಲಿರುವ ತಲೆಭಾರದ ಆಡಳಿತ ಖರ್ಚಿನಿಂದ ಯಾವ ಅರ್ಥವಾಗಿಯೂ ಕೊಡಗಿನ ಸರಕಾರಕ್ಕೆ ಸಾಲಮಾಡಬೇಕಾಗಿ ಬಂದಿದೆ. ಈ ಕಾರಣದಿಂದ ಕೊಡಗಿನವರು ಕೊಡಗಿಗೆ ಒಂದು ನ್ಯಾಯವಾದ ಹಿಂದಳಿಕೆಯ (Opening Balance) ಮತ್ತು ವಾರ್ಷಿಕ ವಂತಿಗೆಯನ್ನು ಕೂಡಬೇಕೆಂದು ಇಂಡಿಯಾ ಸರಕಾರಕ್ಕೆ ಹಲವು ವರ್ಷಗಳಿಂದ ಮೊರೆಯಿಟ್ಟದ್ದು ಅರಣ್ಯ ರೋದನವಾಗಿದೆ. ಪ್ರತಿ ಕಾನ್ಸಿಲು ಅಧಿವೇಶನಗಳಲ್ಲಿ ಈ ವಿಷಯದ ಠರಾವುಗಳು ಇದ್ದೇ ಇವೆ. ಇದಕ್ಕೆಲ್ಲ ಸರಕಾರದವರು 'ಇಂಡಿಯಾ ಸರಕಾರದವರೆಡೆಪತ್ರವ್ಯವಹಾರ ನಡಿಸಿದ್ದೇವೆ' ಈ ವಿಷಯವನ್ನು ಖಂಡಿತ ಹೇಳಲಾಗದಿಲ್ಲ. ಸಹಾಯ ಗೊನೆಯಹುದು' ಎಂದು ಮುಂತಾಗಿ ಭರವಸೆ ಕೊಡುತ್ತಲಿರುವದು ಸಾಮಾನ್ಯವಾಗಿದೆ.

ಕಳೆದ ಕೊಡಗು ನ್ಯಾಯವಿಧಾಯಕ ಸಭೆಯಲ್ಲಿ 'ಸರ್ ಓಟೋನೇವಿಯರ್' ಕಮಿಟಿಯವರೆದುರು ಕೊಡಗಿನ ಜನತೆಯ ಪರವಾಗಿ ಮಂಡಿಸಿ ಕೊಡಗು ಒಂದು ವಿಶೇಷ ಪ್ರಾಂತವಾಗಿರಲು ಬೇಕಾದಷ್ಟು ವಾರ್ಷಿಕ ವಂತಿಗೆಯನ್ನು ಪಡೆಯಬೇಕು ಎಂಬ ಠರಾವಿಗೆ ಸರಕಾರದವರು ಈ ವಿಷಯದಲ್ಲಿ ಹೆಚ್ಚು ಶ್ರದ್ಧೆ ಇಟ್ಟಿಯವರೆಂದೂ, ಕೊಡಗಿಗೆ ವಾರ್ಷಿಕ ವಂತಿಗೆಯು ಖಂಡಿತ ಸಿಗಬೇಕಾದದ್ದು ನ್ಯಾಯವೆಂದೂ, ಈ ವಿಚಾರಗಳ ನ್ನೆಲ್ಲಾ ಇಂಡಿಯಾ ಸರಕಾರದವರಿಗೆ ತಿಳಿಸಿರುವುದಾಗಿಯೂ ಹೇಳಿದರು. ಆದರೆ ಈಗಿನ ವರದಿಯಲ್ಲಿ ಕೊಡಗು ನಿರ್ಲಕ್ಷಿಸಲ್ಪಟ್ಟಿರುವದನ್ನು ನೋಡುವಾಗ್ಯೆ ಕೊಡಗಿಗೆ ಈ ಪರಿಸ್ಥಿತಿಯಲ್ಲೇ ಇಷ್ಟೆ ನಿರ್ಣಯವಾಗಬಹುದಾದ ಸಂಭವನೇ ಹೆಚ್ಚಾಗಿರುವುದಲ್ಲದೆ ಸಹಾಯವನ್ನು ಪಡೆಯುವಿಕೆಯನ್ನು ಜೊಂಗುಹಾದ ಸಂಭವವೇ ಇಲ್ಲದಾಗಿರುವುದು. ಕೊಡಗಿನ ಈ ಬೊದಲು ಹೇಂದ್ರ ಸರಕಾರವು ಒಂದು ಕೋಟಿ ರೂಪಾಯಿಗಳ ಸರಿಗೆ ಲಾಭ ಪಡೆದಿರುವದಾದರೂ ಕೂಡ ಈಗ ಈ ಕಷ್ಟದ ಸಮಯದಲ್ಲಿ ಒಂದು ಸಹಾಯವನ್ನು ನೀಡದಿರುವುದು ಒಳಗೆ ತೃಪ್ತಿಕರವಾಗಿದೆ ನೇಮಿಯರ್ ವರದಿಯಲ್ಲಿ ದೊಡ್ಡ ವಿಷಯಗಳೆಲ್ಲಕ್ಕೂ ಯಥೇಚ್ಛ ಧನ ಸಹಾಯ ದೊರಕಿದೆ. ಅಲ್ಲದೆ ಈ ವರೆಗೆ ಅಂದರೆ 1936 ನೇ ಏಪ್ರಿಲ್‌ನ ವರೆಗಿದ್ದ ಇಂಡಿಯಾ ಸರಕಾರದ ಸಾಲಗಳೆಲ್ಲವೂ ಪಜ ವಾಡಲಾಗಿ ಕೊಡಗಿಗೂ ಈಗಾಗಲೇ ಕೇಂದ್ರ ಸರಕಾರದಿಂದ ಅಂದಾಜು 8,10 ಲಕ್ಷದ ಸಾಲ ದೊರಕಿದೆ. ಈ ಸಾಲ ವದ್ದಾಗಿದೆಯೇ ಏನೋ ತಿಳಿಯದು. ಸುಧಾರಣೆಗಳ ವಿಚಾರ ಏನಾಯಿತೆಂಬುದೂ ಇನ್ನೂ ತೀರ್ಮಾನವಾಗಿಲ್ಲ. ಆರ್ಥಿಕ ಸಹಾಯದ ವಿಚಾರವೇನಾಗುವದೆಂಬುದರ ಸೂಚನೆಯೇ ಇಲ್ಲ. ಅದ ಮೇಲೆ ಕೊಡಗಿನ ಅವಸ್ಥೆ ಏನಾಗಲಿರುವದೊ ? ಇದರಿಂದ ದೇಶದಲ್ಲಿ ಅತೃಪ್ತಿಯು ವಿಪರೀತವಾಗಿರುವದು. ಈ ವರೆಗೆ ಸರಕಾರದವರಲ್ಲಿ ಮಾಡಿದ ವಿನಂತಿ, ಬಿನ್ನಹಗಳು ನಿಷ್ಫಲವಾದವು. ಇನ್ನು ದೇಶೀಯರೇ ಇದಕ್ಕೆ ತಕ್ಕ ಜಳವಳವನ್ನೆಬ್ಬಿಸಿ ತಮ್ಮ ಹಕ್ಕಾದ ಸಹಾಯವನ್ನು ಪಡೆಯಬೇಕಾಗಿದೆ ಇಲ್ಲವಾದರೆ ಎಂದೆಂದಿಗೂ ಇದೇ ರೀತಿ ನಿಕೃಷ್ಟಾವಸ್ಥೆಯಲ್ಲೇ ಇರಬೇಕಾಗುವುದು.

ಸಂತಾಪ ವಿಜೃಂಭಣೆ.

ಡಾಕ್ಟರ್ ಯಂ. ಎ. ಅನ್ಸಾರಿಯವರ ಅನಿರೀಕ್ಷಿತ ಮರಣದ ದುಃಖವಾರ್ತೆಯು ಕೊಡಗಿನವರನ್ನೆಲ್ಲಾ ತಲ್ಲಣಗೊಳಿಸಿತು. ಈ ಸಂಬಂಧ ಇಲ್ಲಿಯವರ ಸಂತಾಪವನ್ನು ಸೂಚಿಸಲಿಕ್ಕಾಗಿ ಈ ತಾರೀಕು 13ನೇ ಬುಧವಾರ ವೀರರಾಜಪೇಟೆ ರೇಸಿಂಗ್ ರಸ್ತೆಯ ಎದುರುಗಡೆ ಮೈದಾನದಲ್ಲಿ ಮೆ. ಮಜ್ಜರಂಡ ಚೀಯಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೆ. ಪಿ ಐ. ಬೆಳ್ಯಪ್ಪನವರು ಅಧ್ಯಕ್ಷರ ಅನುಮತಿಯಿಂದ ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟು, ಡಾಕ್ಟರ್ ಅನ್ಸಾರಿಯವರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿ, ಅವರ ಮರಣದಿಂದ ಹಿಂದೂ ದೇಶಕ್ಕೆ ಉಂಟಾದ ಅಪಾರ ನಷ್ಟವನ್ನು ಕುರಿತು ಭಾಷಣ ಮಾಡಿದರು ಮೆ. ಐನಂಡ ಕಾರ್ಯಪ್ಪನವರಿಂದ ಅನುವೇದಿಸಲ್ಪಟ್ಟ ಈ ಗೊತ್ತುವಳಿಯನ್ನು ಸಭಿಕರೆಲ್ಲರೂ ಎದ್ದು ನಿಂತುಕೊಂಡು ಮೌನವಾಗಿ ಬೆಂಬಲಿಸಿದರು

"ಭಾರತದ ಮೊಸ್ತ ದೇಶ ಭಕ್ತರೂ, ಅದ್ವೀತೀಯ ದೇಶ ಸೇವಕರು ಮತ್ತು ಕಾಂಗ್ರೆಸಿನ ಮಾಜಿ ಅಧ್ಯಕ್ಷರೂ ಆದ ಡಾಕ್ಟರ್ ಅನ್ಸಾರಿಯವರ ಅಕಾಲ ಮರಣಕ್ಕೆ ಈ ಸಭೆಯು ಯಾವ ರೀತಿಯಾಗಿಯೂ ದುಃಖವನ್ನು ಸೂಚಿಸುವುದಿಲ್ಲದೆ ಅವರ ಕುಟುಂಬಕ್ಕೆ ತಮ್ಮ ಸಂತಾಪವನ್ನು ತೋರಿಸಿಕೊಳ್ಳಲಿಕ್ಕಾರೆ."

ಅಧ್ಯಕ್ಷರಿಗೆ ವಂದನೆಗಳಿಂದ ವಿಜೃಂಭಣೆಯು ಮುಕ್ತಾಯವಾಯಿತು.

ಸುಭಾಷ್ ಚಂದ್ರಬೋಸ್ ದಿನ.

ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದ ಪಂಡಿತ ಜವಾಹರ್‌ಲಾಲ್ ನೆಹರುವರು ಪ್ರಕಟಿಸಿದ ಮೇರೆ ಭಾರತ ಭೂಮಿಯ ಎಲ್ಲಾ ಮುಖ್ಯ ಸ್ಥಳಗಳಲ್ಲಿ ಈ ತಾ. 10 ನೇ ಆದಿತ್ಯವಾರ ಸುಭಾಷ್ ಚಾಂದ್ರಬೋಸ್ ದಿನವು ಆಚರಿಸಲ್ಪಟ್ಟಿತು. ಕೊಡಗಿನಲ್ಲಿ ಈ ದಿನವು ಗೊತ್ತುಪಡಿಸಲ್ಪಟ್ಟಲ್ಲಿ ಆಚರಿಸಲ್ಪಟ್ಟಿತು ಆದಿನ ಮಧ್ಯಾಹ್ನ 1½ ಗಂಟೆಗೆ ಕಾಂಗ್ರೆಸ್ ಸ್ವಯಂಸೇವಕರು ರಾಷ್ಟ್ರೀಯ ಧ್ವಜವಂದನೆ ಮಾಡಿ, ರಾಷ್ಟ್ರೀಯ ಗೀತೆಗಳನ್ನು ಹಾಡಿದರು. ಜಯಘೋಷ ಮಾಡಿದರು. ಪಟ್ಟಣದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೋದರು. ಮೆರವಣಿಗೆಯು ಆಸ್ಪತ್ರೆಯ ಒಳ ಮೈದಾನವನ್ನು ತಲುಪುವವರೆಲಿ ಅಲ್ಲಿ ಧ್ವಜವಂದನೆಯು ಮತ್ತು ಧ್ವಜಾವರೋಹಣವು ಮುಗಿದ ಮೇಲೆ ಸಭೆಯು ಮುಕ್ತಾಯವಾಯಿತು.

ನಂತರ ಒಂದು ಸಾರ್ವಜನಿಕ ಸಭೆಯು ನಡೆಸಲ್ಪಟ್ಟಿತು. ಮೆ. ರಾ. ಚಂಗಪ್ಪಡ ಮೊದಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮೆ ಕೊಡಂದೇರ ಚಾಂಗಪ್ಪನವರು ಈ ಕೆಳಗಿನ ಠರಾವನ್ನು ಸೂಚಿಸಿ, ಬ್ರಿಟಿಷರ ಆಳಿಕೆಯಲ್ಲಿ ಹಿಂದೂಮುಸ್ಲಿಂರನ್ನು ಸಂಪೂರ್ಣ ನಿರೀಕ್ಷಿತರಾಗಿಯೂ, ಕ್ರಾಂತಿಕಾರರಾಗಿಯೂ ಮಾಡುತ್ತಿರುವ ಕಾರಣಗಳನ್ನು ವಿವರಿಸಿ ಭಾಷಣ ಮಾಡಿದರು.

'ನ್ಯಾಯವಾದ ಕಾರಣವೇನೂ ಇಲ್ಲದೆ ಶ್ರೀಯುತ ಸುಭಾಷ್ಚಂದ್ರಬೆ ಅವರನ್ನು ಸರ್ಕಾರದವರು ಕೈದು ಮಾಡಿ, ವಿಚಾರಣೆಯೇನೂ ನಡಿಸದೆ ಅವರನ್ನು ಒಂದನುಲ್ಲಿಟ್ಟಿರುವುದು ದೊಡ್ಡ ಅನ್ಯಾಯ: ಈ ಕೃತ್ಯವನ್ನು ಸಭೆಯು ಸಂಪೂರ್ಣ ಖಂಡಿಸುತ್ತದೆ.'

ಮೆ. ಪಿ. ಐ ಬೆಳ್ಯಪ್ಪನವರು ಈ ಠರಾವನ್ನು ಅನುವೋದಿಸಿ, ಸುಭಾಷ್ ಬೋಸರ ಗುಣ ಕಥನ ಮಾಡಿ, ಸರ್ಕಾರವರ ಅದಮ್ಯಸ್ಯವಿತ ವರ್ತನೆಯನ್ನು ಖಂಡಿಸಿ ಮಾತನಾಡಿದರು ಠರಾವು ಸರ್ವಸಮ್ಮತದಾದಿ ಮುಂಜೂರಾಯಿತು.

ಅಡ್ಡಿಸ್ ಅಬಾಬ ದಿನ.

ಆ ಮೇಲೆ ಇತ್ತೋಪಿಯ ಯುದ್ಧವನ್ನು ಕುರಿತ ಠರಾವ್ಯ ಸಭೆಯು ಮುಂದಿಡಲಾಯಿತು. ಕಾಂಗ್ರೆಸ್ಸಿನ ಅಧ್ಯಕ್ಷರ ಕೋರಿಕೆ ಮೇರೆ ಅಡ್ಡಿಸ್ ಅಬಾಬ ದಿನವನ್ನು ಈ ತಾ. 9ರಲ್ಲಿ ಆಚರಿಸಲು ಸಾಧ್ಯವಾಗದ್ದರಿಂದ ಅವನ್ನು ಈ ದಿನವೇ ಆಚರಿಸಲಾಯಿತು.

'ನಾಗರೀಕರೆಂದುಕೊಳ್ಳುವ ಇಟೆಲಿಯವರು ಯಾವ ದೊಂದು ಕಾರಣವಿಲ್ಲದೆ, ಬಲವೇ ನ್ಯಾಯವೆಂಬ ಕಾಡು ಜನರ ತತ್ವವನ್ನನುಸರಿಸಿ, ಬಹು ಪುರಾತನದಿಂದ ಸ್ವತಂತ್ರವಾಗಿದ್ದ ಅಬಿಸೀನಿಯಾ ಜನತಾಂಗವನ್ನು, ನಾಗರೀಕತೆಗೆ ವಿರುದ್ಧವಾಗಿ ವಿಷವಾಯುವನ್ನು ಉಪಯೋಗಿಸಿ, ಅವರ ದೇಶದ ಮೇಲೆ ಧಾಳಿ ನಡಿಸಿ, ಅಲ್ಲಿ ಚಕ್ರವರ್ತಿಯನ್ನು ಹೊರದೂಡಿದ್ದು ತಂಬಾ ಅನ್ಯಾಯವೂ ಖಂಡನೀಯವೂ ಆಗಿದೆ'

ಮೆ ರಾ. ಪುಟ್ಟಂಡ ಬೆಳ್ಯಪ್ಪನವರು ಈ ಗೊತ್ತುವಳಿಯನ್ನು ಸೂಚಿಸಿ, ಜನತಾಂಗಗಳ ಕಂಟದವರು ಅಬಿಸೀನಿಯಾ ಚಕ್ರವರ್ತಿಯವರಿಗೆ ಸಹಾಯ ಮಾಡುತ್ತೇವೆಂದು ಹೇಳಿ ಕಡೆಗೆ ಹೇಗೆ ಮೋಸ ಮಾಡಿದರು, ಇಟೆಲಿಯವರು ಎಷ್ಟರ ಮಟ್ಟಿಗೆ ಅನಾಗರೀಕರಂತೆ ವರ್ತಿಸಿರುವರೆಂಬ ವಿಷಯಗಳನ್ನು ಕುರಿತು ಭಾಷಣ ಮಾಡಿದರು. ಮೆ ಕೆ ಸಿ. ಕರಿಯಪ್ಪನವರಿಂದ ಅನುಮೋದಿಸಲ್ಪಟ್ಟ ಈ ಗೊತ್ತುವಳಿಯು ಯಾವ ವಿರೋಧವಿಲ್ಲದೆಯೂ ಮುಂಜೂರಾಯಿತು. ಧ್ವಜವನ್ನು ಕೆಳಗಿಳಿಸಿ, 'ವಂದೇ ಮಾತರಂ' ಗೀತೆಯಿಂದ ಸಭೆಯು ಮುಕ್ತಾಯವಾಯಿತು.

ಇತ್ತೀಚಿನ ಸಂಗ್ರಹ.

ಜಿಲ್ಲೆಯ.

ಪೊಳ್ಬೆಟ್ಟಕ್ಕೆ ಕ್ಯಾಂಪು ಹೋಗಿದ್ದ ಕಮಿಷನರವರು ಈ ತಾ. 10 ರಲ್ಲು ವಾಪಸು ಬಂದಿರುವರು.

ಈ ವಾರ ಮಂಗಳೂರಿನಲ್ಲಿ ಕಾಫಿ ಖಂಡಿಗೆ ರೂ 110 ರಿಂದ 125 ರ ವರೆಗೆ ಕ್ಯಾರುವಿಕ್ಕಿಂಗು ಸಿಕ್ಕಿಬರುತ್ತಿದೆ.

ಈ ತಾ 8 ರಲ್ಲು ಕೊಂಗಂಡ ಕುಟುಂಬದ ಪಟ್ಟೆದಾರರಾದ ಮೆ. ಕೆ ಂಗಂಡ ಭೀಮಯ್ಯನವರು ಸ್ವರ್ಗಸ್ಥರಾದರೆಂದು ತಿಳಿಯುತ್ತೇವೆ.

ವೊನ್ನಂಪೇಟೆ ಶಾರದಾಶ್ರಮದಲ್ಲಿ ಈ ತಾ. 9 ರಲ್ಲಿ ಜರುಗಲಿಕ್ಕಿದ್ದ ಶ್ರೀ ರಾಮಕೃಷ್ಣ ಪರಮಹಂಸರ ಶತಾಬ್ದೋತ್ಸವವು ಮುಂದರಿಸಲಾಗಿದೆ.

ವೀರಾಜಪೇಟೆಯಲ್ಲಿ ಸಡೆಯಲಿಕ್ಕಿರುವ ಕೊಡಗು ಜಮಾನ್ದಾರರ ಸಂಘದ ವಾರ್ಷಿಕ ಮಹಾ ಸಭೆಗು ಅಧ್ಯಕ್ಷರಾಗಿ ಶ್ರೀಮತಿ ರುಕ್ಮಿಣಿ ಲಕ್ಷ್ಮಿಪತಿ ಯವರು ಬರುವರು.

ಈ ತಾ. 9 ರಲ್ಲಿ ಮೂರ್ನಾಡು ಶಾಲೆಯ ವಿದ್ಯಾರ್ಥಿಗಳ ಸಹಕಾರ ಸೊಸೈಟಿಯ ಪ್ರಥಮ ವಾರ್ಷಿಕ ಜನರಲ್ ಮೀಟಿಂಗು ಮೆ ಪಂಗ್ಯಂಡ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲು ಸಡೆಯಿತು.

ಮೂರ್ನಾಡು ಗವರ್ನಮೆಂಟ್ ಮೋಡಲ್ ಶಾಲೆಯ 7 ನೇ ವಾರ್ಷಿಕೋತ್ಸವವು ಮಡಿಕೇರಿ ಮುನ್ಸೀಫರಾದ ಮೆ. ಪಿ ಯಂ. ನಾರಾಯಣ ಬಿ. ಎ., ಬಿ ಎಲ್. ರವರ ಅಧ್ಯಕ್ಷತೆಯಲ್ಲಿ ಈ ತಾ. 20 ನೇ ಬುಧವಾರ ನಡೆಯಲಿಕ್ಕಿದೆ

ಮಡಿಕೇರಿ ಹೈಸ್ಕೂಲ್ ಸೆಂಟರಿನಲ್ಲಿ ನಡೆದ III ಫಾರಂ ಪರೀಕ್ಷೆಯಲ್ಲಿ ಈ ಕೆಳಗೆ ಕಾಣಿಸಿದ ತೆ ಹುಡುಗರು ತೇರ್ಗಡೆ ಹೊಂದಿರುವರು—ಮಡಿಕೇರಿ 71ರಲ್ಲಿ 54, ನಾಪೋಕ್ಲು 28ರಲ್ಲಿ 21, ಗೂನಾಡು 22ರಲ್ಲಿ 14, ಸೋಮವಾರಪೇಟೆ 9 ರಲ್ಲಿ 2, ಕೊಟ್ಟೂರು 15ರಲ್ಲಿ 11, ಕಕ್ಕಬೆ 9ರಲ್ಲಿ 4, ಕೊಡ್ಲಿಪೇಟೆ 1ರಲ್ಲಿ 1, ಕಾಕೋಟು ಪರಂಬು ಯಾರೂ ಇಲ್ಲ.

ಈಗಿನ ಹೊಸ ಸೈಕರಾಮರು ಹಿಂದೂ ದೇಶದ ಪೊಲೀಸು ಸಿಬ್ಬಂದಿಯವರಿಗೆ ಒಂದು ಸಂದೇಶ ನ್ನು ಕಳುಹಿಸಿದ್ದರು ಅದನ್ನು ಈ ತಾ. 11 ರಲ್ಲಿ ಮಡಿಕೇರಿ ಬ ಆವಣೆ ಎದುರು ನಡೆದ ಪೊಲೀಸು ಸ್ಪೆಷಲ್ ಪೆರೇಡಿನಲ್ಲಿ ಕೊಡಗು ಕಮಿಷನರ ವ ಓದಿದರು. ಅದರ ಕನ್ನಡ ತರ್ಜುಮೆಯನ್ನು ಅಸ್ಟೆಂಟ್ ಕಮಿಷನರವರು ಓದಿದರು. ಈ ಪೆರೇಡಿಗೆ ಹಾಜರಾಗಿ ಲನಾನುಕೂಲವಿದ್ದ ಪೊಲೀಸರಿಗೆ ಆ ಸಂದೇಶವನ್ನು ಓದಲು ತಾ. 13 ರಲ್ಲಿ ವೀರಾಜಪೇಟೆಲ್ಲೂ, ತಾ. 14 ರಲ್ಲು ಸೋಮವಾರಪೇಟೆಯಲ್ಲೂ ಸ್ಪೆಷಲ್ ಪೆರೇಡುಗಳಾಗುವೆಂದು ತಿಳಿಯುತ್ತೇವೆ.

ಇಂಟರ್‌ವಿಂಡಿಯೇಟ್ ಪರೀಕ್ಷೆ ಫಲಿತಾಂಶ.

ಮದ್ರಾಸ್ ಯೂನಿವರ್ಸಿಟಿಯ ಕಳೆದ ಇಂಟರ್‌ವಿಂಡಿಯೇಟ್ ಪರೀಕ್ಷೆಗೆ ಕೊಡಗಿನಿಂದ ಹೋದವರ ಫಲಿತಾಂಶವು ಇಲ್ಲಿ ಕೊಡಲಾಗಿದೆ.

ಪೂರ್ತಿ ಪಾಸಾದವರು.

ಮೆ. ಗಳಾದ ಕೊರವಂಡ ಯಂ. ಸೋಮಣ್ಣ ಕೆ ವಿ. ಶ್ರೀನಿವಾಸ್ ಕೊಂಗಂಡ ಡಿ ಕಮುಂಬಯ್ಯ, ಬೆಳ್ಳಿಯಪ್ಪ ನಂದಣ್ಣ, ಬೊಳ್ಳೆರ ಅಪ್ಪಯ್ಯ, ನಡಿಕೇರಿಯಂಡ ಕೆ. ಗಣಪತಿ, ಕೋದಂಡ ಬಿ ದೇವಯ್ಯ, ಮಂಡೇಪಂಡ ಎ. ಗಣಪತಿ, (I ಕ್ಲಾಸ್) ಅಪ್ಪಾರಂಡ ಎ. ಮುತ್ತಣ್ಣ, (I ಕ್ಲಾಸ್) ಎ ಎಸ್. ವೆಂಕಟಸುಬ್ಬರಾವ್, ಜಿ. ಎಸ್. ನರಸಿಂಹಮೂರ್ತಿ, (Iನೇ ಕ್ಲಾಸ್) ಮಂಡೇಪಂಡ ಯಂ ಸುಬ್ಬಮ್ಮ ಮತ್ತು ಎ ಪಿ ಗೋಪಾಲಕೃಷ್ಣರಾವ್.

II ಮತ್ತು III ಭಾಗದಲ್ಲಿ.

ಮೆ. ಕೋಡಿಮಣಿಯಂಡ ಕೆ. ಕಾರ್ಯಪ್ಪ.

II ಭಾಗದಲ್ಲಿ.

ಮೆ. ಗಳಾದ ಕೀತಿಯಂಡ ಬಿ ಮೂದಯ್ಯ, ಪಾಲೇಕಂಡ ಪಿ ಕರುಂಬಯ್ಯ ಮತ್ತು ಕೋದಂಡ ಗಂಗಮ್ಮ.

I ಮತ್ತು II ಭಾಗದಲ್ಲಿ.

ಮೆ. ಗಳಾದ ಯನ್. ಯಸ್. ರಾಮದಾಸ್, ಸೋಮೆಯಂಡ ಟಿ ಅಪ್ಪಚ್ಚ ಬಿದ್ದಂಡ ನಾಚಯ್ಯ ಮತ್ತು ಸೋಮೆಯಂಡ ಯಂ. ಅಪ್ಪಚ್ಚ.

I ಭಾಗದಲ್ಲಿ.

ಮೆ.. ಬಿದ್ದಂಡ ಚಿಂಣಪ್ಪ.

ಇವರುಗಳಿಗೆಲ್ಲ ನಮ್ಮ ಅಭಿನಂದನೆಗಳು.

ಹಿಂದೂ ದೇಶ.

ಬರೋದ ಹೊಸ ಗವರ್ನರರಾದ ಸರ್ ಆರ್ಚ್‌ಬಾಲ್ಡ್ ಕೊಕ್ರೇನ್‌ರವರು ಬರ್ಮಕ್ಕೆ ತಲಪಿ, ಮೇಮಯೋವಿನಲ್ಲಿ ತಮ್ಮ ಹುದ್ದೆಯ ಕಾರ್ಯಭಾರಗಳನ್ನು ನಿರ್ವಹಿಸಿಕೊಂಡರು.

ಕವಿವರ್ಯ ರವೀಂದ್ರರ 75ನೇ ವರ್ಷ ವರ್ಧಂತಿಯು ಕಲ್ಕತ್ತೆಯಲ್ಲಿ ಯಥೋಚಿತವಾಗಿ ನೆರವೇರಿತು. ಶ್ರೀಯುತರಿಗೆ ಜಗದೀಶ್ವರನು ಚಿರಾಯುಷ್ಯವನ್ನೂ ಆರೋಗ್ಯವನ್ನೂ ಕರುಣಿಸಲಿ!

ನೂತನವಾಗಿ ಸ್ಥಾಪಿಸಲ್ಪಟ್ಟ ಕಾಂಗ್ರೆಸ್ ಅಂತರ ರಾಷ್ಟ್ರೀಯ ಖಾತೆಯ ಕಾರ್ಯ ಭಾರವನ್ನು ನಡೆಸುವುದಕ್ಕೆ ಉಸಕ್ರಮಿಸಿದೆ ಡಾ. ಹೆಚ್ ಯಂ. ಆಶ್ರಾಫ್‌ರವರು ಈ ಶಾಖೆಯ ಮುಖ್ಯ ಸ್ಥರಾಗಿ ನೇಮಕ ಹೊಂದಿರುವರು.

ತಾ. 12ರಲ್ಲು ಬೊಂಬಾಯಿಯಲ್ಲಿ ಒಂದು ದೊಡ್ಡ ಭಂಡಾರಕ್ಕೆ ಬೆಂಕಿ ಬಿದ್ದು ಸೂಮಾರು 25 ಲಕ್ಷ ರೂ ಗಳ ನಷ್ಟ ಸಂಭವಿಸಿದೆಯಂತೆ ಬಹಳ ವರ್ಷಗಳಿಂದೀಚೆಗೆ ಇಷ್ಟು ಭೀಕರವಾದ ಬೆಂಕಿ ಅನಾಹುತವಾಗಿದ್ದಿಲ್ಲ.

ನ್ಯಾಯಾಧಾಯಕ ಸಭೆಗಳಲ್ಲಿ ಸದಸ್ಯರು ಮಾಡಿದ ಭಾಷಣಗಳನ್ನು ಪ್ರಚಾರ ಮಾಡುವುದಕ್ಕೆ ಸದಸ್ಯರಿಗೆ ಸಂಪೂರ್ಣ ಅಧಿಕಾರವಿರಬೇಕು. ಆ ಪ್ರಯುಕ್ತ ಪೈಸ್ ಅಕ್ಟನ್ನು ತಿದ್ದುಪಡಿ ಮಾಡಬೇಕು ಎಂಬ ವಿಷಯದಲ್ಲಿ ಒಂದು ನಿರ್ಣಯವನ್ನು ತರಲಿರುವರು.

ಕಾಂ. ಸೈಸಡೆಂಟರಾದ ಸಂ. ಜವಾಹರಲಾಲರು 'ಅಬಿಸೀನೀಯಾದ ದಿನಾಚರಣೆ' ಕುರಿತು ಹೊರಡಿಸಿದ ಅದೊಂದು ಪ್ರಕಟಣೆಯ ಸಂಬಂಧ ಅಸಂತುಷ್ಟರಾಗಿ ಕಲ್ಕತ್ತೆಯ ಇಟೆರಿಯನ್ ಕೌನ್ಸಿಲ್ ಜನರಲ್‌ರವರು ಪಂಡಿತರ ವತ ನವನ್ನು ಆಕ್ಷೇಪಿಸಿ ಪತ್ರ ಬರೆದುದಕ್ಕೆ, ಪಂಡಿತರು ಯೋಗ್ಯವಾದ ಒಂದು ಉತ್ತರವನ್ನು ಅವರ ಕಡೆಗೆ ಕಳುಹಿಸಿರುವರು.

ಭಾರತ ಮಾತೆಯ ಸಪುತ್ರರೂ, ಪ್ರಸಿದ್ಧ ದೇಶಾಭಿಮಾನಿಗಳೂ, ಅದಶ್ ತ್ಯಾಗಿಗಳೂ ಆದ ಶ್ರೀ ಸುಭಾಷ್ ಚಂದ್ರ ಭೋಸರವನ್ನು ನಿಷ್ಕ್ರಮಣವಾಗಿ ಸೆರೆಮನೆಗೆ ಹಾಕಿದ ಸರ್ಕಾರದ ವರ್ತನೆಯನ್ನು ಭಾರತ ಖಂಡವ ಜನರು ಖಂಡಿಸಬೇಕೆಂದು ರಾಷ್ಟ್ರಪತಿ ಜವಾಹರ್ ಲಾಲರು ಸೂಚಿಸಿರುವ ವೇರೆಗೆ ಹಿಂದೂ ದೇಶದ ಎಲ್ಲೆಡೆಗಳಲ್ಲಿಯೂ ಸುಭಾಷರ ದಿನಾಚರಣೆಯು ತಾ 10 ರಲ್ಲು ಜರುಗಿಸಲ್ಪಟ್ಟಿತು

ಕ್ವೆಟ್ಟಾ ನಗರದಲ್ಲಿ ಏಪ್ರಿಲ್ ತಾ. 1 ರಿಂದ 18 ರ ವರೆಗೆ ಭೂಕಂಪದ ದೆಸೆಯಿಂದ ಹಾನಿ ಹೋಗಿನ್ದ 69 ಮನೆಗಳಲ್ಲಿದ್ದ ಆಸ್ಪತ್ರೆಗಳು ಸುಮಾರು 9 201 ರೂಪಾಯಿನಷ್ಟು ತೆಗೆಯಲ್ಪಟ್ಟಿತು ಇದು ವರೆಗೆ ಅಗೆದು ತೆಗೆದಿರುವ ಆಸ್ತಿಯ ಒಟ್ಟು ಮೊಬಲಗು 57,78,319 ರೂಪಾಯಿಗಳು, ಏಪ್ರಿಲ್ ತಾ. 12 ರಿಂದ 18 ರ ವರೆಗೆ 39 ಶವಗಳು ದೊರಕಿದವು. ಇದು ವರೆಗೆ 8,283 ಶವಗಳು ಸಿಕ್ಕಿನಂತಾಯಿತು. ಏಪ್ರಿಲ್ ತಾ. 23 ರ ವರೆಗೆ ಪರಿಹಾರ ಕಾರ್ಯಗಳಿಗಾಗಿ 3½ ಲಕ್ಷ ರೂಪಾಯಿ ಖರ್ಚು ಮಾಡಲ್ಪಟ್ಟಿದೆಯೆಂದು ತಿಳಿಯಲಾಗಿದೆ.

ಲಾರ್ಡ್ ಲಿನ್‌ಲಿತ್‌ಗೋ ಸಮಿತಿಗೆ ವರ್ಷಕ್ಕೆ 19,200 ಪೌಂಡು ಸಂಬಳವೂ ಅವರು ನಡಿಸುವ ಕೂಟ ಚಿಕಿತ್ಸಾದಿಗಳ ಮತ್ತು ವಿನೋದಕೂಟಗಳ ಖರ್ಚು ವೆಚ್ಚಗಳಿಗಾಗಿ ಸ್ವಲ್ಪ ಹಣವೂ ಕೊಡಲ್ಪಡುವುದು. ಆದಾಗ್ಯೂ ವೈಸರಾಯರಿಗೆ ಈ ಹಣವು ಖರ್ಚಿಗೆ ಸಾಲದೆಂದೂ, ಅವರು ತಮ್ಮ ಸ್ವಕೀಯ ಆದಾಯದಿಂದ ವಿಶೇಷ ಹಣ ಖರ್ಚು ಮಾಡಬೇಕಾಗುತ್ತದೆಂದೂ ಹೇಳಲಾಗಿದೆ. ಎಲ್ಲಾ ವೈಸರಾಯರುಗಳೂ ತಮ್ಮ ತಮ್ಮ ಅಧಿಕಾರಾವಧಿಯನ್ನು ಮುಗಿಸಿಕೊಂಡು ವಾಪಸು ಹೋಗುವಾಗ ಅಧಿಕಾರಸ್ಥೇರರಾಗಿ ಮಾಡುವುದಕ್ಕೆ ಮುಂಚೆ ಇದ್ದದಕ್ಕಿಂತಲೂ ಅವರು ಬಡವರಾಗಿ ವಾಪಸು ಹೋಗುತ್ತಾರೆಂದು ಹೇಳಲಾಗಿದೆ.

ದರ್ಭಾಂಗ ಸಂಸ್ಥಾನದ ಮಹಾರಾಜರವರು ತಮ್ಮ ಸಂಸ್ಥಾನದ ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ 5 ಲಕ್ಷ ರೂ ಸಾಕ್ಷ್ಯಕ್ಕೆನ್ ಮಾಡಿರುತ್ತಾರೆ. ಎಲ್ಲಾ ಸರ್ಕಾರಿನ ವೇನೇಜರುಗಳನ್ನೂ ಅವರವರ ಸರ್ಕಾರುಗಳಲ್ಲಿ ಅಗತ್ಯವಾಗಿ ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳೇನೆಂಬುವುದನ್ನು ತಿಳಿಸಬೇಕೆಂಬುವುದನ್ನು ತಿಳಿಸಬೇಕೆಂದು ಕೇಳಿಯುತ್ತಾರೆ. ಬೆಂಕಿಯಿಂದಲಾ ಪ್ರವಾಹಗಳಿಂದಲೂ ಅಕಸ್ಮಾತ್ ಅಪಾಯಗಳು ಸಂಭವಿಸಿದಲ್ಲಿಯಾ ನಷ್ಟಪಟ್ಟವರಿಗೆ ಸಹಾಯ ಒದಗಿಸಿಕೊಡಲು ಪ್ರತಿಯೊಬ್ಬ ಸರ್ಕಾರ್ ವೇನೇಜರ್ ವರ್ಷದಲ್ಲಿಯೂ ಹಣ ಕೊಟ್ಟಿರುತ್ತಾರೆ ಮತ್ತ, ಅಥವಾ ಅನರ್ಥಗಳು ಸಂಭವಿಸಿದೊಡನೆಯೇ ತಮಗೆ ತಿಳಿಸಬೇಕೆಂದೂ ಅವಶ್ಯಕವಾದಲ್ಲಿ ತಾವು ಇನ್ನು ಸಹಾಯ ಮಾಡುವವರಾಗಿದ್ದಾರೆಂದೂ ಮಹಾರಾಜರವರು ತಿಳಿಸಿರುತ್ತಾರೆ.

ಬಾಲ್ಯ ವಿವಾಹವನ್ನು ತಡೆಯಲು ಬ್ರಿಟಿಷ್ ಇಂಡಿಯಾದಲ್ಲಿ ಶಾರ್ದಾ ಆಕ್ಟು ಎಂಬ ಕಾನೂನು ಜಾರಿಯಲ್ಲಿದೆ ತಲೆಮಾರುಗಳಿಂದಲೂ ಬಾಲ್ಯ ವಿವಾಹ ಪದ್ಧತಿಯನ್ನೇ ನಡೆಸಿ, ತಕ್ಕಾ ಒಂದಿರುವ ಬ್ರಿಟಿಷ್ ಇಂಡಿಯಾ ನಿವಾಸಿಗಳಿಗೆ ಈ ಖಾನೂನಿನಿಂದ ಈಗಲೂ ಯಾವ ಅಡ್ಡಿ ಆಗಿಲ್ಲ ಬ್ರಿಟಿಷ್ ಇಂಡಿಯಾ ಅಧಿಸತ್ಯಗಳಲ್ಲದ ದೇಶೀಯ ಸಂಸ್ಥಾನಗಳಲ್ಲಿ ಈ ವಿವಾಹ ನಿರೋಧದ ಖಾನೂನು ಜಾರಿಯಲ್ಲಿಲ್ಲ. ಆದುದರಿಂದ ಬ್ರಿಟಿಷ್ ಇಂಡಿಯಾದ ಪ್ರಜೆಗಳು ಅನೇಕವಾಗಿ ದೇಶೀಯ ಸಂಸ್ಥಾನಗಳಿಗೆ ಹೋಗಿ ಕಿರಿಯ ವಯಸ್ಸಿನ ಹೆಣ್ಣು ಮತ್ತು ಗಂಡು ಮಕ್ಕಳ ವಿವಾಹಗಳನ್ನು ನಡೆಸಿತ್ತಲೇ ಇದ್ದಾರೆ ಕಳೆದ ವರ್ಷ ಪುತಿಕೋಟೆ ಸಂಸ್ಥಾನದಲ್ಲಿ ಅನೇಕ ಬಾಲ್ಯ ವಿವಾಹಗಳು ನಡೆದವು ಈ ವರ್ಷವೂ ವಿವಾಹ ಕಾರ್ಯಗಳನ್ನು ನಡೆಸಲು ಬ್ರಿಟಿಷ್ ಇಂಡಿಯಾದ ಪ್ರಜೆಗಳು ಅಲ್ಲಿ ಹೋಗಿ ಸೇರುತ್ತಿದ್ದಾರೆ. ಆಗಲೇ ಐದಾರು ವಿವಾಹಗಳು ಜರುಗಿದವೆಂದು ಪ್ರಕಟವಾಗಿದೆ.

ಪಂಜಾಬ್ ಸರ್ಕಾರದ ಮಾಜಿ ಮಂತ್ರಿಯಾಗಿದ್ದ ಲಾಲಾ ಹರಿಕಿಶನ್ ಲಾಲ್‌ರವರ ಮಗನೂ ಭಾರತ ಇನ್‌ಷೂರೆನ್ಸ್ ಕಂಪೆನಿಯ ಮ್ಯಾನೇಜಿಂಗ್ ಡೈರೆಕ್ಟರೂ ಆದ ಎಂ. ಜೀವನ್ ಲಾಲ್ ಗೌಬಾರವರು ಆ ಕಂಪನಿಯು ಸುಮಾರು 19,000 ರೂಪಾಯಿಗಳನ್ನು ದುರುಪಯೋಗಪಡಿಸಿದ ಆರೋಪದಿಂದ ದಸ್ತಗಿರಿಯಾಗಿದ್ದು ಲಾಹೋರಿನ ಸಿಟಿ ಮ್ಯಾಜಿಸ್ಟ್ರೇಟರು ಅವರನ್ನು 20,000 ರೂಪಾಯಿ ಜಾಮೀನಿನ ಮೇಲೆ ಬಿಟ್ಟಿರುತ್ತಾರೆಂದು ಪ್ರಕಟವಾಗಿದೆ.

ಪಂಜಾಬಿನಲ್ಲಿರುವ ಲೊಹರು ಎಂಬ ಸಣ್ಣ ಸಂಸ್ಥಾನದಲ್ಲಿರುವ ಚೀಹಾರ್ ಪೊಲೀಸ್ ಸ್ಟೇಷನ್ನನ್ನು ಆ ಸಂಸ್ಥಾನದಿಂದ ಓಡಿ ಹೋಗಿರುವ ಅನೇಕ ದಂಗೇಕೋರರು ಸುಭಾದಾರ್ ದಿಲ್ ಮುಖರಾಂ ಎಂಬವನ ನಾಯಕತ್ವದಲ್ಲಿ ಮುತ್ತಿಗೆ ಹಾಕಿ ಪೊಲೀಸ್ ನಾಯಕರನ್ನು ವಿಶೇಷ ಗಾಯಪಡಿಸಿ ಅಲ್ಲಿದ್ದ ಬಂದೂಕುಗಳನ್ನೂ, ಮುದ್ದುಗುಂಡುಗಳನ್ನೂ ಎತ್ತಿಕೊಂಡು ಹೋದರೆಂದೂ, ಸಂಸ್ಥಾನದ ಪೊಲೀಸಿನವರಿಗೂ ದಂಗೇಕೋರರಿಗೂ ನಾಲ್ಕು ಘಂಟೆಗಳ ಕಾಲ ಹೊಡೆದಾಟವಾಯಿತೆಂದೂ, ದಂಗೆಕೋರರು ಡಿಹಾರ್ ಗ್ರಾಮಕ್ಕೆ ಬೆಂಕಿ ಹೊತ್ತಿಸಿ ಓಡಿ ಹೋದರೆಂದೂ ಹೇಳಲಾಗಿದೆ. ಈ ಹೊಡೆದಾಟದಲ್ಲಿ ಒಬ್ಬ ದಂಗೆಕೋರನು ಮೃತ್ಯ ಮರಣಹೊಂದಿದನು. ಸಂಸ್ಥಾನದ ಸಿಪಾಯಿಗಳಲ್ಲಿ ಯಾರಿಗೂ ಪ್ರಾಣಾಪಾಯವಾಗಿಲ್ಲವೆಂದು ಹೇಳಲಾಗಿದೆ.

ವಿದೇಶ.

ಈಜಿಪ್ಟಿನ ವಾಫ್ಡ್ ಕಕ್ಷಿಯ ಮುಖಂಡರಾದ ನಹಾಸ್ ಪಾಷಾರವರನ್ನು ಮಂತ್ರಿ ಮಂಡಲವನ್ನೇರ್ಪಡಿಸುವಂತೆ ಪ್ರಾರ್ಥಿಸಲಾಯಿತು ಈಚೆಗೆ ಅವರು ಮಂತ್ರಿಮಂಡಲವನ್ನೇರ್ಪಡಿಸಿರುತ್ತಾರೆ.

ಪಾದರಸವನ್ನು ಹವೆಯ ರೂಪವಾಗಿ ಮಾಡಿ ಅದರ ಮೂಲಕ ಎಲೆಕ್ಟ್ರಿಕ್ ದೀಪಗಳನ್ನು ಇನ್ನು ಮುಂದೆ ಬೆಳಗಿಸುವರೆಂದೂ, ಈ ದೀಪಗಳು ಹೆಚ್ಚು ಕಾಂತಿಯನ್ನು ಕೊಡುವವೆಂದು ತಿಳಿಯುಬಂದಿದೆ.

ಜರ್ಮನಿ ದೇಶದ ಒಮ್ಮೆ ಭಾರೀ ವಿಮಾನವು 17 ಗುಟ್ಟಿಗಳಲ್ಲಿ ದಕ್ಷಿಣ ಅಮೇರಿಕದಿಂದ ಜರ್ಮನಿಗೆ ಬಂದು ತಲಪಿತು. ಯಾವ ವಿಮಾನವಾಗಲೀ ಇದು ವರೆಗೂ ಇಷ್ಟು ವೇಗದಲ್ಲಿ ಬಂದಿಲ್ಲವೆಂದು ತಿಳಿಯುಬಂದಿದೆ.

ಅಮೇರಿಕಾ ದೇಶದ ನೌಕಾಬಲವನ್ನು ಪ್ರಪಂಚದಲ್ಲಿ ಅತ್ಯಧಿಕವಾಗಿ ಮಾಡಲು ಅಲ್ಲಿನ ಪ್ರತಿನಿಧಿ ಸಭೆಯ ಕಮಿಟಿಯವರು ಒಂದು ಮಸೂದೆಯನ್ನು ಪಾಸ್ ಮಾಡಿರುತ್ತಾರೆ. ಈ ಮಸೂದೆಯಲ್ಲಿ 84 ಯುದ್ಧದ ಹಡಗುಗಳನ್ನು ಕಟ್ಟುವುದಕ್ಕಾಗಿ 53,10,000 ಡಾಲರುಗಳನ್ನು ಖರ್ಚು ಮಾಡಲು ಅಂದಾಜು ಮಾಡಲಾಗಿದೆ.

ಪ್ರಪಂಚ ಆದ್ಯಂತವಲ್ಲೂ ಇರುವ ಇಂದ್ರಜಾಲ ಮಹೇಂದ್ರಜಾಲ ವಿದ್ಯಾಪ್ರವೀಣ (ಮೆಜೀಷಿಯನ್ಸ್) ಮಹಾ ಸಭೆಯೊಂದು ಸೆಪ್ಟೆಂಬರ್ ತಾ. 15 ರಿಂದ 25 ರ ವರೆಗೆ ಮ್ಯೂನಿಚ್ ನಗರದಲ್ಲಿ ನಡೆಯುವುದು. ಜರ್ಮನಿಯ ರೈಲ್ವೆ ಇಲಾಖೆಯವರು ಪರದೇಶಗಳಿಂದ ಬರುವ ಯಕ್ಷಿಣಿಗಾರರು ಜರುಗುವ ನಿಯಲ್ಲಿ ಸುಜಾರಲು ವಿಶೇಷ ತರದ ಸುಜಾರ ಕಾರ್ಯಗಳನ್ನೇರ್ಪಡಿಸಿಕೊಡುತ್ತಾರೆಂದು ಹೇಳಲಾಗಿದೆ.

ಪ್ರೇಮ ವಿದ್ಯಾ ಪೀಠ.

ತುಂಗಭದ್ರಾ (ಬಳ್ಳಾರಿ ಜಿಲ್ಲೆ)

ಇದರ ಹೊಸ ವರ್ಷವು ನಾಳೆ ಜುಲೈಯಲ್ಲಿ ನೊದಲಾಗುತ್ತದೆ ವಿದ್ಯಾರ್ಜನೆಯು ಉದ್ಯೋಗಕ್ಕೆ ಬೇಕಾಗಿದ್ದರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ವೆಟರ್ನಿಕ್, ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆಗುವವರಿಗೂ ಯೋಗ್ಯತೆಗೆ ತಕ್ಕಂತೆ ವಿಧವಿಧವಾದ ಕೋರ್ಸ್‌ಗಳಿವೆ. ಫೀಸ್ ಫೆಕ್ಚಸ್ ಮಾಹಿತಿಗಾಗಿ ಕೂಡಲೆ 2 ಆಣೆ ಸ್ಟ್ಯಾಂಪ್ ಇಟ್ಟು ಬರೆಯಿರಿ.

ವಿದ್ಯಾಧ್ಯಕ್ಷರು ಡಾ. ಭುಮತಿರಾಯರು,
ಬಿ ಎ., ಎಲ್. ಟಿ, ಎಫ್. ಪಿ ಎಸ್. ಎಸ್.,
ಭಿಷಗ್ರತ್ನ, ರಿಜಿಸ್ಟ್ರಾರ್.

ಪ್ರಕಟಣೆ.

Repairing chairs, easy chairs, cane chairs, cots etc. in rattan will be done in singles, doubles and diamond at moderate charges.

ಬೆತ್ತದ ಕುರ್ಚಿ, ಆರಾಮು ಕುರ್ಚಿ ಮತ್ತು ಮಂಚ ಮುಂತಾಮವುಗಳನ್ನು ತೃಪ್ತಿಕರವಾಗಿ ಅತಿ ಸುಲಭ ಚಾರ್ಜಿನಲ್ಲಿ ಬೆತ್ತದಿಂದ ಮಾಡಲಾಗುವುದು.

Apply to:—

P. S. RAMAPPA,
Rattan Works,
MecDowell & Co., Buildings,
Mercara.

4—4

ಅಬಿಸೀನಿಯೂದ ವಾರ್ತೆ.

ಮೇ ತಾ. 8

ಹಾರಾರಿನಲ್ಲೂ ಲೂಟಿ.

ಅಡ್ಡಿಸ್ ಅಬಾಬದಲ್ಲಿನ ಲೂಟಿ ಕೊಂಜ ಸಮೂಧಾನವಾ ಹವ್ದೇ. ಹಾರಾರ್ ನಗರದಲ್ಲಿ ಈಗ ಲೂಟಿಗೆ ಪ್ರಾಶಸ್ತ್ಯವಾಗಿದೆ. ಆಯುಧಪಾಣಿಗಳಾದ ದಂಗೆಕಾರರು ಹಾರಾರ್ ನಗರವನ್ನು ಲೂಟಿ ಗೆಯ್ಯುತ್ತಿರುವರು.

ಇಟೇಲಿಯನರು ಬ್ಯಾಂಕ್ ತೆರೆದರು.

ಅಡ್ಡಿಸ್ ಅಬಾದಲ್ಲಿನ ಬ್ಯಾಂಕ್ ಆಫ್ ಇತೋಪಿಯವನ್ನು ಮುಚ್ಚಿದ್ದರಷ್ಟೆ. ಈಗ ಇಟೆಲಿಯವರು ಅದನ್ನು ತೆರೆದಿರುವರು. ಜನರೆಲ್ಲರೂ ಇತೋಪಿಯಾ ನಾಣ್ಯವಾದ ತೆಲರ್ ಎಂಬದನ್ನು ಇಟೆಲಿ ನಾಣ್ಯಕ್ಕೆ ಬದಲು ಮಾಡುತ್ತಿರುವರು.

ರಾಸ್ ಸಯೂಮರು ಮರಿ ಹೊಕ್ಕಿದರು.

ಅಬಿಸೀನಿಯಾ ವೀರ ಯುದ್ಧ ನಾಯಕರಾದ ರಾಸ್ ಸಯೂಮರು ಇಟೆಲಿಯವರ ಮರಿ ಹೊಕ್ಕಿದರೆಂದು ತಿಳಿಯಲಾಗಿದೆ.

ಮೇ ತಾ. 9.

ಇಟೆಲಿ ರಾಜರ. ಅಬಿಸೀನಿಯಾ ಚಕ್ರವರ್ತಿಗಳಾದರು.

ಇಟೆಲಿಯ ರಾಜರಾಗಿರುವ ವಿಕ್ಟರ್ ಇಮೇನ್ಯುವೆಲ್ ರವರು ಅಬಿಸೀನಿಯಾ ಚಕ್ರವರ್ತಿಗಳಾಗಿ ಅಭಿಷಿಕ್ತರಾಗಿರುವರು.

ಅಬಿಸೀನಿಯಕ್ಕೂ ವೈಸರಾಯರು.

ಇಟೆಲಿ ಸೈನದ ಸೇನಾ ನಾಯಕರಾಗಿದ್ದ ಮೂರ್ಷಲ್ ಬೊಡೋಗ್ಲಿಯೋರವರನ್ನು ಅಬಿಸೀನಿಯಾದ ವೈಸರಾಯರನ್ನಾಗಿ ನೇಮಿಸಿರುವರು.

ಮುಸಲೋನಿಯ ಪ್ರಕಟಣೆ.

'ಇನ್ನು ನನಗೆ ವಸಾಹತುಗಳನ್ನು ಕೂಡಿಹಾಕುವ ಆಲಸೆ ಇಲ್ಲ. ಈಗ ನಾನು ಶುದ್ಧ ರಾಷ್ಟ್ರಗಳ ಸಾಲಿಗೆ ಸೇರಿದೆನು!' ಎಂದು ಮುಸಲೋನಿಯವರು 'ಡೈಲಿಮೈಲ್' ಪತ್ರಿಕಾ ಪ್ರತಿನಿಧಿಗೆ ತಿಳಿಸಿದರು. 'ಇನ್ನು ಇತೋಪಿಯದಲ್ಲಿ ಉತ್ತಮ ಸರ್ಕಾರದ ಸ್ಥಾಪನೆಯಾಗುವದು. ಇದರಿಂದ ಎಲ್ಲರಿಗೂ ನೆಮ್ಮೊದಿ ಮತ್ತು ಸುಖವಿದೆ' ಶಾಂತಿಯ ಶರ್ತುಗಳು ರೋಮ್ ಗೌರವಕ್ಕೆ ಕುಂದು ಬರುವಂತಿರಬಾರದು. ಅಬಿಸೀನಿಯಾ ಸಮಸ್ಯೆಯನ್ನು ನಾವು ಸ್ವಚ್ಛವಾಗಿ ಕೊನೆಗೊಳಿಸಬೇಕೆಂದಿದ್ದೇವೆ.' 'ಇಟೆಲಿಯು ತನ್ನ ಸಾಮ್ರಾಜ್ಯದಲ್ಲಿ ಬ್ರಿಟೈನ್, ಫ್ರಾನ್ಸ್ ಅಥವಾ ಇನ್ನಾವ ದೇಶಗಳು ಬಂದು ಆರ್ಥಿಕ ಸಂಬಂಧವಾದ ಯೋಜನೆಗಳನ್ನು ಕಾರ್ಯ ರೂಪಕ್ಕೆ ಹಚ್ಚುವಲ್ಲಿ ಅಡ್ಡಿ ಮಾಡಲಾರದು. ಇಟೆಲಿಯ ಆರ್ಥಿಕ ಒಲವನ್ನು ಕೇಳಿ ಲೋಕವೇ ಬೆರಗಾದೀತು!' 'ಲೀಗ್ ಆಫ್ ನೇಷನ್ಸಿನ (ಜನಾಂಗ ಸಂಘದ) ಸದಸ್ಯರಾಣಿಯಾಗಿ.ವುದಾದರೆ ಇಟೆಲಿಯು ತನ್ನ ಸಹಕಾರವನ್ನು ನೀಡಲು ಸಿದ್ಧವಿದೆ. ಲೀಗ್ ಆಫ್ ನೇಶನ್ಸ್ ಅಗತ್ಯವಿದೆ ಆದರೆ ಅವರ ನಿಯಮ ನಿಬಂಧನೆಗಳು ಆಯಾ ರಾಷ್ಟ್ರಗಳಿಗನುಕೂಲವಾಗಿರಬೇಕು.'

ಅಬಿಸೀನಿಯಾ ಚಕ್ರವರ್ತಿಗಳು.

ಅಬಿಸೀನಿಯಾ ಚಕ್ರವರ್ತಿಗಳು ಪಾಲಸ್ತೈನಿನಲ್ಲಿ ತಮ್ಮ ಪರಿವಾರವನ್ನು ಬಿಟ್ಟು ಇಂಗ್ಲೆಂಡಿಗೆ ಹೋಗುವ ಅಭಿಪ್ರಾಯದಲ್ಲಿದ್ದರು. ಆದರೆ ಬ್ರಿಟನ್ ಸರ್ಕಾರವು ಈಗ ತಾವು ಬರುವುದು ಅನುಕೂಲವಾಗಲಿಕ್ಕಿಲ್ಲವೆಂದು ತಿಳಿಸಿರುವರಂತೆ. ಹಾಗೆಯೇ ಅವರು ಇನ್ನೂ ಕೆಲ ಸಮಯದ ವರೆಗೆ ಪಾಲಸ್ತೈನದಲ್ಲೇ ಇರಬೇಕಾಯಿತು.

ಮೇ ತಾ 12.

ಇಟೆಲಿ ರಾಷ್ಟ್ರಗಳ ಕೂಟವನ್ನು ತ್ಯಜಿಸುವದೇ?

ರಾಷ್ಟ್ರಗಳ ಕೂಟದ ಸಭೆಯಲ್ಲಿ ಇಟೆಲಿ ಅಬಿಸೀನಿಯಾ ಪ್ರಶ್ನೆಯು ಚರ್ಚಿಸಲ್ಪಡುತ್ತಿದೆ. ಸ್ಯಾಂಕ್ಷನ್‌ಗಳನ್ನು ಜಾರಿಗೆ ತರಬೇಕೆಂದು ಅಭಿಪ್ರಾಯ ಪಡುತ್ತಿರುವರು. ಇದಕ್ಕೆ ಇಟೆಲಿಯ ಪ್ರತಿನಿಧಿಯು ಬಹಳ ಪ್ರತಿಭಟಿಸಿರುವರು. ಅಲ್ಲದೆ ಜಿನೀವಾದಿಂದ ಇಟೆಲಿ ಡೆಲಿಗೇಷನ್ನಿನವರೂ, ರಾಯಬಾರಿಗಳೂ ಮತ್ತು ಬೇರನ್ ಎಲಾಯಿಸಿಯವರು ಇಟೆಲಿಗೆ ಹಿಂತೆರಳಿರುವರು. ಇದರಿಂದ ಇಟೆಲಿಯು ಲೀಗ್ ಸಂಸ್ಥೆಯನ್ನು ತ್ಯಜಿಸುವದೋ ಎಂಬ ಸಂಶಯವು ತಲೆದೋರಿದೆ

NOTICE.

This is to notify the Public that Mr S. Davidoss Manager of the North Coorg Club Mercara has undertaken the Messing Contract of the above Club and that the North Coorg Club will not responsible for any debts incurred by the said Mr. S. Davidoss.

(*Sd*) **G. M. Brameld,**
Hon Secretary,
North Coorg Club, Mercara,

ಪ್ರಕಟಣೆ.

ಇದರಿಂದ ಸರ್ವರಿಗೆ ಗ್ರಾಮದ ಐಮುಡಿಯುಡ್ಯ ಕುಟುಂಬಸ್ಥರಿಗೂ ಮತ್ತು ಸದರಿ ಗ್ರಾಮದ ಪಟೇಲರಿಗೂ ಗ್ರಾಮದ ಸರ್ವರಿಗೂ ಸಹ ತಿಳಿಯಪಡಿಸುವದೇನಂದರೆ—

ನನ್ನ ಮನೆ ಐತಿ ಪೂವಯ್ಯನ ಹೆಂಡತಿ ಸೋಮಕ್ಕ ನೆಂಬವಳಿಗೆ ಹುಟ್ಟಿದಂತ ಮೂರು ಜನ ಮಕ್ಕಳ ಪೈಕಿ ಒಂದನೇ ಮತ್ತು ಮೂರನೇ ಹೆಣ್ಣು ಮಕ್ಕಳಿಗಲ್ಲದೆ, ಎರಡನೇ ಸುಬ್ಬಯ್ಯನೆಂಬವನಿಗೆ ನನ್ನ ಕುಟುಂಬದಿಂದ ಐತಿ ಪೂವಯ್ಯನ ಪಾಲಿಗೆ ಹೋದಂತ ಸ್ಥಿರ ಚರಾಸ್ತಿಗಳನ್ನು ಪಾಲುಕೊಟ್ಟಿರುವುದಾಗಿ ಯಾ ಕೊಡುವದಾಗಿ ತಿಳಿಯಬಾರ್ತ್ತೆ. ಹಾಗೆ ಕೊಡಲು ಯಾವ ಹಕ್ಕು ಇರುವುದಿಲ್ಲ. ಹಾಗೆ ಕೊಟ್ಟಿದ್ದರೂ ಸಹ ಆಮು ರದ್ದಾಗಿರತಕ್ಕದ್ದು. ಮತ್ತು ಪಾಲು ಕೊಡಲು ಸೇರಿದವರಿದ್ದರೆ ಅಂತವರ ಸಾಕ್ಷಿಗಳನ್ನು ರದ್ದುಪಡಿಸಿಕೊಳ್ಳತಕ್ಕದ್ದು ಎಂಬದನ್ನು ಈ ಮೂಲಕ ತಿಳಿಯಪಡಿಸಿರುತ್ತೇನೆ.

ಚಿಕ್ಕಬ್ಬಾರು, ಎ. ಎಸ್. ಜೋಯಪ್ಪ.

ಡಾಕ್ಟರ್ ಮೋತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗಿತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಈ ತಾ. 15 ರಿಂದ ಬರುವ ಜೂನ್ ತಾರೀಕು 1 ರ ವರೆಗೆ ಇವರು ಊರಿಗೆ ಹೋಗುವ ಕಾರಣ ಅವರ ಆಸ್ಪತ್ರೆಯನ್ನು ಮುಚ್ಚುತ್ತಾರಾಗಿ ತಿಳಿಸುತ್ತಾರೆ.

ಅವೆಲ್ಲವೂ ಒಂದೇ ಸಮ ತಂಗುತ್ತವೆ.



ಆದರೆ ಮತ್ತೊಂದರಲ್ಲಿ ಅರ್ಧ ನೀರು.

ಕಡಿಮೆ ಬೆಲೆಯ ಸಾಧಾರಣ ಸಾಬೂನುಗಳಲ್ಲಿ ಅರ್ಧಾಂಶವು ಬರೇ ನೀರಾಗಿದೆ. ಆದ್ದರಿಂದ ತೊಳೆಯಲ್ಲಿ ಅವುಗಳಲ್ಲಿ ನೃತ್ಯಾಸೆಗಳು ಕಾಣಬರುವುದಿಲ್ಲ. ಆದರೆ ಅವುಗಳಲ್ಲಿ ಸೋಪು ಕಡಿಮೆ. ಅವು ಫಕ್ಕನೆ ಕಂಗುವವು. ಆದರೆ 501 ಮೂರ್ಕಿನ ಸಾಬೂನಿನಲ್ಲಿ ಗಟ್ಟಿ ಸಾಬೂನು ಇರುವುದರಿಂದ ನಿನುಗೆ ತಕ್ಕ ಪ್ರತಿಫಲಗಳು ದೊರೆಯುವವು ನಿಮ್ಮ ವಸ್ತ್ರಗಳನ್ನು ಶೀಘ್ರದಲ್ಲೇ ಶುಭ್ರಗೊಳಿಸುವವು

ವೆಚ್ಚ ಕಡಿಮೆ. ವಸ್ತ್ರ ಬಾಳಿಕೆ. ಶ್ರಮ ಅತೀ ಕಡಮೆ!

ಟಾಮ್‌ಕೋ ಮೂರಾಟದ ಮಳಿಗೆ, TOMCO ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು. **501 Soap**

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತ್ತು ತಾತಾಪುರ.

52—50. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧ ನಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನೈನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು

1. Andrographis paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನೈನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದು ನಂಬಿರಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರ್ 68, ಕೊಚಿನ್.

ಸ್ಪೆಷಲಿಸ್ಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ. } ಏಜೆಂಟ್—ವಿ. ಬಿ ಕಾಮತ್, ಮಹದೇವಪೇಟೆ, ಮಡಿಕೇರಿ.
52—48

ನವರತ್ನ ಫಾರ್ಮಸಿ, ಕೊಚಿನ್

ಒಂದು ಶತ್ರವೂನ ಬಾಳಿರಿ.

(ಮಿ. ಸರ್ ವಿಲ್ಲಿಯಂ ಅಲ್ಪತ್ ನೋಟ್ ಇವರ ಲೇಖನದ ಆಧಾರದಿಂದ)

ರೋಗವನ್ನು ಗುಣಪಡಿಸುವುದಕ್ಕಿಂತಲೂ ಅದನ್ನು ಬಾರದಂತೆ ನೋಡಿಕೊಳ್ಳುವುದು ಎಷ್ಟೋ ವಾಸಿ. ಇದರ ತಾತ್ಪರ್ಯವನ್ನು ಎಲ್ಲರೂ ಅರಿತಿದ್ದರೆ, ಇಂದು ಆಸ್ಪತ್ರೆಗಳಲ್ಲಿ ಅಸಂಖ್ಯಾತ ಜನರು ನರಳುತ್ತಿರಬೇಕಾಗಿರಲಿಲ್ಲ. ಆರೋಗ್ಯವನ್ನು ಕಾಪಾಡುವಂತಹ ಸೂತ್ರಗಳನ್ನು ಚೆನ್ನಾಗಿ ಮನನಮಾಡಿಕೊಳ್ಳದೆ ರೋಗದ ಚಿಹ್ನೆಗಳು ಜೋರಾದೊಡನೆ ಅದರ ನಿವಾರಣೋಪಾಯವನ್ನು ಕೈಗೊಳ್ಳುತ್ತಿದ್ದರೆ ಇಷ್ಟೆಲ್ಲಾ ದೀನ ಅವಸ್ಥೆಗೆ ಜಗತ್ತು ಕುತ್ತಾಗುತ್ತಿರಲಿಲ್ಲ. ಅಜಾಗ್ರತೆಯೆ ನಮ್ಮ ವ್ಯಾಧಿಗಳ ಕಾರಣವಾಗಿದ್ದರೂ ಅಜ್ಞಾನವೂ ಅದಕ್ಕಿಂತ ಶ್ರೇಷ್ಟ ಕಾರಣವಾಗಿರುತ್ತದೆ. ಆರೋಗ್ಯ ಜ್ಞಾನವು ಹುಲುಮಾನವ ಜೀವನಗಳನ್ನು ಸರಿಪಡಿಸುತ್ತೆ. ಆದರೆ ಅಜ್ಞಾನವು ಬಹುಳವಾಗಿ ಪ್ರಸಾರದಲ್ಲಿದೆ. ಅಲ್ಲದೆ, ಅನೇಕ ವಿಧೋದ್ಯೋಗಗಳಿಂದ ಇದರ ಸ್ಥಿತಿಯು ಇನ್ನಷ್ಟು ಕೆಲ್ಸು ಹೆಚ್ಚಾಗುತ್ತಿದೆ.

ಆದರೆ ವ್ಯವಹಾರ ಜ್ಞಾನ, ಅನುಭವ ಮತ್ತು ವಾಸ್ತವತ್ವ ಜ್ಞಾನದೊಂದಿಗೆ ಮಾನವನು ತನ್ನ ಜೀವಮಾನವನ್ನು ಸುರಕ್ಷಿತನಾಗಿ ಸಾಗಿಸಬಹುದು

ಇಷ್ಟೊಂದು ಮುಂದೊತ್ತಿ, ಒಂದನೆಯವು ಈಗ ಪುನಃ ಹಿಂದಿನ ಸೂತ್ರಗಳನ್ನು ಅನುಸರಿಸುವುದೆಂದರೆ ಕೇವಲ ನಾಚಿಕೆಗೇಡು ಅದ್ದರಿಂದ ಈಗಿನ ಪರಿಸ್ಥಿತಿಗೆ ಸರಿಯೂದ ರೀತಿಯಲ್ಲಿ ನಮ್ಮ ಜೀವಮಾನವನ್ನು ರೂಪಿಸಬೇಕು. ಇವುಗಳಿಂದ ಪಾರಾಗುವಂತೆ ಒಹಳೇ ಜಲೋ ಉಪಾಯಗಳನ್ನು ಕಂಡು ಹಿಡಿಯುವುದು ಉತ್ತಮವೆಂದು ನನ್ನ ಅಭಿಪ್ರಾಯ. ದೇಹದ ಬೆಳವಣಿಗೆಯೇ ದೇಶದ ಬೆಳವಣಿಗೆ. ಪೂರ್ವದಲ್ಲಿ ದೇಶವು ಸುಭಿಕ್ಷವೂ ಪ್ರಜೆಗಳೂ ಸುಕಾಯರೂ ಆಗಿದ್ದರೆ, ಅವರು ಸಮಂಜಸವಾದ ಆರೋಗ್ಯಕರವಾದ ರೀತಿಯಿಂದ ಜೀವನ ನಡೆಸಿಕೊಂಡಿದ್ದುದೇ, ಅದರ ಫಲವಾಗಿತ್ತು. ಇಂದು ಪ್ರತಿಯೊಬ್ಬನು ದಷ್ಟಪುಷ್ಟನಾಗಿಯೂ ದೀರ್ಘಾಯುವಾಗಿಯೂ ಬಾಳುತ್ತಿದ್ದನು. ರೋಗರುಜಿನ ಬಾಧೆಯು ಅವರಿಗೆ ತಟ್ಟುತ್ತಿರಲ್ಲಿಲ್ಲ. ಇಂದು ನಾವು ಏಕೆ ಹೀಗೆ ಜೀವಿಸಬಾರದು. ನಾವೂ ಅವರಂತೆ ಹೀಗೆ ನರುಳ್ಳಲೆ? ಇದನ್ನು ತಿಳಿದ ನಾನು ಕೆಲವು ಕಾಲ ಅಮಿಂಡ ಅಭ್ಯಾಸಗಳನ್ನು ಅಭ್ಯಾಸಿಸಿ, ಅವರಿಂದ ಪರಿಣಾಮವಾಗಿ ಸುಕಾಯನೂ, ಆರೋಗ್ಯವಂತನೂ ಆಗಿರುವೆನು. ನನ್ನ ಅನುಭವದ ಸಂಗತಿಗಳನ್ನೇ ನಿಮಗೂ ತಿಳಿಸುವೆನು.

ಅದಷ್ಟು ಮಟ್ಟಿಗೆ ಮಾಂಸಾಹಾರವನ್ನು ತೊರೆಯಿರಿ ಸಾಧ್ಯವಿದ್ದಲ್ಲಿ ಅದನ್ನು ಸಂಪೂರ್ಣವಾಗಿ ತ್ಯಜಿಸಿರಿ ಅವರ ಬದಲಾಗಿ ವಿಟಮಿನ್ನನ್ನು ಸೇವಿಸಬಹುದು. ವಿಟಮಿನು ದೇಹಾರೋಗ್ಯಕ್ಕೆ ಬಹಳ ಉತ್ತಮ. ಮೈ ಮುರಿದು ಕೆಲಸ ಮಾಡುವವರು, ಅಜೀರ್ಣದ ಬಾಧೆ ಇಲ್ಲದವರೂ ಮಾಂಸವನ್ನು ಉಪಯೋಗಿಸಬಹುದು. ಅಂಥವರು ಅದನ್ನು ಭುಂಜಿಸಿದರೆ ಶರೀರಕ್ಕೆ ಬೇಕಾದ ಕೊಬ್ಬನ್ನು ಪಡೆದು ಜೀವಿಸಲಾಗಿ ಬೆಳೆಯಬಹುದು. ಇಲ್ಲವಾದರೆ ಆ ಮಾಂಸವು ವಿಷವಾಗಲದೆ ಕರುಳಿಗಳಲ್ಲಿ ಕೂತಿತು. ಅನೇಕಾನೇಕ ರೋಗಗಳಿಗೆ ಎಡೆಕೊಡುತ್ತದೆ. ಮೇಲ್ನೆವೆ ಚಾಪ ನೋಡುವುದೆ ಮುಖ್ಯ ಕೆಲಸವಾಗಿರುವ ಆಫೀಸರುಗಳು ಇದನ್ನು ಸರ್ವಥಾ ಭುಂಜಿಸಬಾರದು.

ಫಲವಸ್ತುಗಳು ನಿಮ್ಮ ದಿನನಿತ್ಯದ ಆಹಾರವಾಗಿರಲಿ. ಕಾಯಿಪಲ್ಯೆಗಳ ಪದಾರ್ಥಗಳನ್ನು ವಿಶೇಷವಾಗಿ ತಿನ್ನಿರಿ. ಹಾಲು ಬೆಣ್ಣೆ ತುಪ್ಪ ಇವುಗಳನ್ನು ಸಮೃದ್ಧಿಯಾಗಿ ಪಡೆಯಿರಿ. ಇವೆಲ್ಲವೂ ನಿಮಗೆ ಬೇಕಾಗಿ ಎವ ದೇಹಪುಷ್ಟತೆಯನ್ನು ಕೊಡುತ್ತವೆ. ಆಹಾರ ಸತ್ವವು ದೇಹ ಬೆಳವಣಿಗೆಗೆ ಮಾತ್ರ ಲ್ಲ. ಜೀವದ ಬೆಳವಣಿಗೆಗೂ ಪ್ರಾಮುಖ್ಯವಾಗಿದೆ ಅದರಿಂದಾಗಿ ನಮ್ಮ ದೇಹದಲ್ಲಿರುವ ಜೀವಕಣಗಳು ಶಕ್ತಿಯನ್ನು ಹೊಂದಿ ಪ್ರತಿಯೊಂದು ನರಗಳಲ್ಲಿ ಶಕ್ತಿವರ್ಧಕ ಧೃತಿಯನ್ನು ಸಂಚಯಿಸಿ ನವಚೈತನ್ಯವನ್ನು ನವಳಿಲೆಯನ್ನೀಯುವದು. ಒಂದು ತಡವು ಅದಿಕ್ಕೆ ಬೇಕಾದ ಆಹಾರವು ಸಿಕ್ಕದೆ ಇದ್ದಲ್ಲಿ ಅವು ನಶಿಸಿ ಹಾಳಾಗುತ್ತವೆ. ಆಂತೆಯೇ ಜೀವಸತ್ವವು ಶಿಥಿಲತೆಯನ್ನು ತಾಳಿ ಕುಸಿದು ಬೀಳುವುದು. ನಾವು ತೆಗೆದುಕೊಳ್ಳುವ ವಿಶ್ರ ಆಹಾರಗಳಲ್ಲಿ ಎ ಬಿ ಸಿ ಎಂಬ ಮೂರು ಜಾತಿಯ ಆಹಾರ ಸತ್ವಗಳಿವೆ. ಅವರೆ ಇವುಗಳಲ್ಲಿ ಬಿ. ಆಹಾರ ಸತ್ವವು ನಮಗೆ ಬಹಳ ಕಮ್ಮಿಯಾಗಿ ದೊರಕುವುದರಿಂದ ನಮ್ಮ ಆರೋಗ್ಯವು ಅಗಾಗ ಹಾಳಾಗಲು ಕಾರಣ. ಇದರಿಂದಾಗಿ ಪಚನಶಕ್ತಿಯು ಕಮ್ಮಿಯಾಗಿ ಸ್ನಾಯುಗಳ ಬಲವು ಕಮ್ಮಿಯಾಗ ತೊಡಗುತ್ತದೆ ಅದ್ದರಿಂದ ಬಿ. ಆಹಾರ ಸತ್ವವಿರುವ ಮೊಟ್ಟೆ, ಮಿಸು ಟೊಮೆಟೊ ಮೊದಲಾದವುಗಳನ್ನು ಸೇವಿಸುವುದು ಒಳ್ಳೆಯದು,

ಮೇಲೆ ಹೇಳಿದ ಆಹಾರಗಳೊಂದಿಗೆ ಇನ್ನೂ ಕೆಲವು ಪದಾರ್ಥಗಳನ್ನು ಮಿಶ್ರ ಮಾಡಿ ತಿಂದರೆ ಅವು ನಮ್ಮ ದೇಹದೊಳಗಿನ ಕೊಳೆ ಕಶ್ಮಲಗಳನ್ನು ಹೊರಗೆಡವಲು ಸಹಾಯಕವಾಗುತ್ತವೆ. ಈ ಪದಾರ್ಥಗಳು ಹೆಚ್ಚಾಗಿ ಶಾಯಿಪಲ್ಯೆಗಳಲ್ಲೇ ಸಿಕ್ಕುತ್ತವೆ. ಸರಿಯೂಗಿ ಪಚನವಾಗುವ ಆಹಾರಗಳು ದೇಹಕ್ಕೆ ಒಳ್ಳೆಯವು ಎಂಬ ಭಾವನೆಯು ತಪ್ಪು. ಇವುಗಳಿಂದಿಗೆ ದೇಹದೊಳಗಿನ ಕಶ್ಮಲಗಳನ್ನು ಹೊರಕಳ್ಳುವ ಆಹಾರವಿದ್ದರೇನೇ ದೇಹದ ಬೆಳವಣಿಗೆಗೆ ಅವು ಲಾಭಕಾರಿಯೂಗುವವು.

ಪ್ರತಿದಿನವೂ ಊಟವಾದ ಕೂಡಲೇ ದೇಹದೊಳಗಿನ ಕೆಂಪೆಯನ್ನು ಹೊರಗೆಡಹಲು ಪ್ರಯತ್ನಿಸಿರಿ. ಇದರಿಂದ ದೇಹದ ಪ್ರಗತಿಯು ನೆಟ್ಟಗಾಗುವುದು ಅಜೀರ್ಣವಾಗದಂತೆ ನೋಡಿಕೊಳ್ಳುವುದು ಒಹಳ ಲಾಭದಾಯಕ. ಕಾರಣ ಈ ಅಜೀರ್ಣವು ಅನೇಕ ಜೀರ್ಣ ರೋಗಗಳ ತವರುಮನೆಯಾಗಿದೆ ಮಿತಿವಿಹಾರಿ ಯಾವುದನ್ನು ಊಣ ಬೇಡಿರಿ ತಿನ್ನಬೇಡಿರಿ ದಿವಸಕ್ಕೆ ಸರಾಸರಿ ಅರ್ಧ ಕುಡಿತೆ ನೀರನ್ನು ಕುಡಿಯಿರಿ, ಬೆಳಿಗ್ಗೆ ಎದ್ದೊಡನೆ 2 ಕುಡುತೆ, ರಾತ್ರಿ ಮಲಗುವಾಗ 2 ಕುಡುತೆ, ಊಟದ ನಡುವಿನಲ್ಲಿ ಊಟಕ್ಕೆ ಮೊಲೆದಲ್ಲಿ. ಬೆಳಿಗ್ಗೆ ಎದ್ದ ಕೂಡಲೇ ಕುಡಿದ ನೀರು ದೇಹದೊಳಗಿನ ಇಂದ್ರಿಯಗಳನ್ನು ಶುಚಿ ಮಾಡುವ ಸಹಕಾರಿಯೂಗುತ್ತದೆ. ಬಹಳ ಬಿಸಿಯೂದ ನೀರನ್ನು ಉಪಯೋಗಿಸಬೇಡಿರಿ. ಅದರಿಂದ ತುಂಬಾ ಹಾನಿ ಇದೆ. ಶುಚಿಯಾದ, ಸರಿಯಾಗಿ ಬೆಳಕು ಗಾಳಿಗೆ ಒಡ್ಡುವ ಕೋಣೆಗಳಲ್ಲಿ ವಾಸಿಸಿರಿ. ಕೆಲವು ಮಂದುತ್ತಿರುವಾಗಲೂ ಗಾಳಿ ಬೆಳಕುಗಳು ಏನೊಂದೂ ತೊಂದರೆಗಳಿಲ್ಲದೆ ನಿಮ್ಮ ಮೈಯನ್ನು ಪವರಿಕೊಂಡು ಹೋಗಲಿ.

ಬಿಸಿಲಿನ ಸ್ನಾನ.

ಸೂರ್ಯನ ಬಿಸಿಲು ನಮ್ಮ ರೋಗಗಳಿಗೆಲ್ಲಾ ದಿವ್ಯ ಔಷಧಿಯಾಗಿದೆ. ಸೂರ್ಯನ ಬಿಸಿಲಿನಿಂದ ನಮ್ಮ ದೇಹವನ್ನು ಅಡಗಿಸುವ ನಾವು ಅದನ್ನು ನಿಷ್ಕಾರಣವಾಗಿ ಅನೇಕಾನೇಕ ರೋಗಗಳಿಗೆ ತತ್ತಾಗುವಂತೆ ಮಾಡುತ್ತಿರುವೆವು ನನ್ನಂತಾಗಿ ಸೂರ್ಯ ಸ್ನಾನವನ್ನು ಮಾಡಬೇಕೆಂತ ನನ್ನ ಮತವಲ್ಲ ಆದರೂ ತಮ್ಮ ಮನೆಯಂಗಳದಲ್ಲಿ ಗುಪ್ತವಾದಲ್ಲಿ ಸ್ತ್ರೀ ಪುರುಷರು ತಮಗೆ ಬೇಕಾದಷ್ಟು ಸೂರ್ಯ ಸ್ನಾನವನ್ನು ಪಡೆಯಬಹುದು. ಕೇವಲ ತಲೆಗಾದ ವಸ್ತ್ರವನ್ನು ಜನನೇಂದ್ರಿಯವನ್ನು ಅಡಗಿಸಲು ಮಡಿಗಿ ಸೂರ್ಯ ಸ್ನಾನವನ್ನು ಮಾಡಬಹುದು: ಇಲ್ಲವೇ ಸೂರ್ಯ ರಶ್ಮಿಗಳು ವಸ್ತ್ರಸೋಸಗಿಂದ ದೇಹವನ್ನು ಮುಟ್ಟಲು ಆಗುವಂತಹ ಉಡುಪನ್ನು ಧರಿಸಿದರೂ ಉತ್ತಮ ನಮ್ಮ ದೇಹವನ್ನು ಆರೋಗ್ಯವಂತಿಕೆಯಿಂದ ಇಡಲು ನಾವಿಕವು ಉಸಿರಾಟವು ಮಾತ್ರ ಅಪೇಕ್ಷನೀಯವಲ್ಲ. ಇಡೀ ದೇಹವೇ ಉಸಿರಾಡಲು ಬಾಧ್ಯವಾಗಿರುವುದು ದೇಹದಲ್ಲಿರುವ ಅನೇಕಾನೇಕ ಕೂತಗಳು ಈ ಉಸಿರಾಟದ ಕೆಲಸವನ್ನು ಸಾಗಿಸುತ್ತಿರಬೇಕು.

ಅಂತಿರುವಾಗ ನಾವೆಷ್ಟು ಮುಚ್ಚಿಟ್ಟುಬಿಟ್ಟರೆ ಎಂತಹ ಅನಾಹುತವು ಸುಭವಿಸಿತು ಎಂಬುದನ್ನು ನೀವೇ ಆಲೋಚಿಸಿರಿ. ಒಹಳ ಬಿಗಿಯೂಗಿ ಉಡುವುದರಿಂದ ದೇಹದ ಉಷ್ಣತೆಯು ಹೆಚ್ಚಾಗಿ ಜ್ವರಕ್ಕೆ ಕಾರಣವಾಗುತ್ತದೆ ಇನ್ನೂ ಈ ರಂದ್ರಗಳಿಗೆ ಕೆಲಸಗಳು ಸರಿಯೂಗಿ ಸಾಗಬೇಕಾದಲ್ಲಿ ದಿನ ನಿತ್ಯವೂ ಸ್ನಾನವು ಅತಿ ಅಗತ್ಯ. ಸಾಯಂಕಾಲ ಬಿಸಿ ನೀರು ಸ್ನಾನಗಳು ದೇಹದ ಆಯಾಸವನ್ನು ಹೋಗಲಾಡಿಸುತ್ತದೆ. ಕೆಲವರಿಗೆ ಬಿಸಿನೀರಿನ ಸ್ನಾನಾನಂತರ ಚಳಿ ಪ್ರಾರಂಭವಾಗುವುದುಂಟು ಕಾರಣ ಅದ್ದರಿಂದ ಬಿಸಿನೀರಿನ ಸ್ನಾನವಾದ ಕೂಡಲೇ ಕಂಬಳಿಯನ್ನು ಹೊದೆದು ದೇಹದ ಉಷ್ಣತೆಯನ್ನು ಒಂದೇ ಸವನೆ ಕಳಗಿಳಿಯದಂತೆ ನೋಡುತ್ತಿರಬೇಕು ಅಂತೂ ಎಲ್ಲರಿಗೂ ತಂಣೀರು ಸ್ನಾನವು ಅವಶ್ಯಕರ. ಆದ್ದರಿಂದ ತಂಣೀರು ಸ್ನಾನ ಮಾಡಲಪೇಕ್ಷಿಸುವವರು ಮುಂದಾಗಿ ವೈದ್ಯರ ಅನುಮತಿಯನ್ನು ಪಡೆಯು ಏರ್ಪಸಲಿ

ಹಲ್ಲುಗಳನ್ನು ದಿನಕ್ಕೆರಡಾವರ್ತಿ ಉಜ್ಜಬೇಕು. ರಾತ್ರಿ ಮಲಗುವಾಗ ಮತ್ತು ಬೆಳಿಗ್ಗೆ ಎದ್ದ ಕೂಡಲೇ. ಶುಚಿಯಾಗಿರುವ ಹಲ್ಲು ಯಾವಾಗಲೂ ಬಿಳ್ದು ಹೋಗುವುದಿಲ್ಲ. ಆಹಾರವಲ್ಲಿರುವ ಜಿಡ್ಡು ಪದಾರ್ಥಗಳು ಹಲ್ಲುಗಳ ಎಡೆಯಲ್ಲಿ ಕೂತು ಅಲ್ಲಿ ಕೊಳತು ಹಲ್ಲುಗಳನ್ನು ಹಾಳುಮಾಡುತ್ತವೆ. ಅವರಲ್ಲಿ ಉದ್ಭವಿಸಿದ ಕ್ರಿಮಿಗಳು ಹೊಟ್ಟೆಯೊಳಗೆ ಹೋಗಿ ಅನಿಸಾತಿಯಾವಾದ ರೋಗಕ್ಕೆ ಈಡು ಮಾಡುತ್ತವೆ

ಜೀರ್ಣಾಂಗಗಳಿಗೆ ಕೆಲಸ ಮಾಡುವಂತಹ ವ್ಯಾಯಾಮವನ್ನು ಬೆಳಿಗ್ಗೆ ಎದ್ದೊಡನೆಯೂ, ಸಾಯಂಕಾಲದ ವೇಳೆಯಲ್ಲಿಯೂ ತಪ್ಪದೆಯಂಕೊಳ್ಳುತ್ತಿರಬೇಕು ಮಧ್ಯ ವಯಸ್ಕರಾದವರಿಗೆ ಇದು ಅತಿ ಅಗತ್ಯ. ಅಗವರ ಜೀರ್ಣ ಶಕ್ತಿಯು ಕಡಿಮೆಯಾಗತೊಡಗುತ್ತದೆ. ಜೀರ್ಣಾಂಗಗಳ ಕೆಲಸವು ಕಡಿಮೆಯಾಗತೊಡಗುತ್ತದೆ. ಅವುಗಳನ್ನು ಸ್ವಮಿತಕ್ಕೆ ತರಲು ಈ ವ್ಯಾಯಾಮವು ಅವಶ್ಯಕ. ನಿರ್ಮಲ ವಾತಾವರಣವೇ ಎಲ್ಲರ ಜೀವಾಳವಾಗಿರುವುದು. ಕಲ್ಮಶ ವಾಯುವನ್ನು ಸೇವಿಸಿ ದೇಹವಂಡನೆಗೆ ಗುರಿಯಾಗಬೇಡಿರಿ.

'ಸ್ವ. ಅ.'

ಇಂದೇ ಆರಂಭಿಸಿರಿ!

ಸುಪ್ರಸಿದ್ಧ

ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಂಜಾಟದಲ್ಲಿ ಏಣಿಸುತ್ತೇರಿರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ಹೆರ ಮಾತ್ರ ಶರೀರಿಕ ದೌರ್ಬಲ್ಯಕ್ಕೆ ಭದ್ರತೆಯನ್ನು.

ಆರೋಗ್ಯಕ್ಕೆ ಕವಚವು

32 ವಜ್ರಕ್ಕೆಗಳ ಟಿನ್ನಿಂದಕ್ಕೆ ರೂ. 1.

ಹೆಚ್ಚಿನ ವಿವರಕ್ಕೆ, ನಮೂರ್ಥ ಹತ್ತಾಗಳ ಟಪ್ಪಾಲು ಹಾಸಲು ವಿಷಯ ಕಳುಹಿಸಲ್ಪಡವ ನಮ್ಮ

ಕಾಮುಶಾಸ್ತ್ರವನ್ನೆನ್ನೇದಿರಿ.

ಆತಂಕನಿಗ್ರಹ ಫಾರ್ಮಸಿ, ಚಿಕ್ಕಜೇಜಚೌಳ,
52—7 ಬೆಂಗಳೂರು ಸಿಟಿ.

೨೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಕಂಪೌಂಡ್

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಕ ಜ್ವರ, ದಿನಬಿಟ್ಟು ಒರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಪಿ. ಒ ಆಸೆ. ಜರೂರು ತರಿಸಿಕೊಳ್ಳಿ.

ಗಣೇಶ ಬಿನಾಯಕರಾವ್ ಕರ್ಕಿ.

(52—32) ಮಂತ್ರಿ ಫಾರ್ಮಸಿ,
ಗಿರಗಾಂವ್, ಬಾಂಬೆ.

ಮೂರಾಟಕ್ಕೆ ಬೆ.

ಶ್ರೀಮಂಗಲನಾಡು ಬಾಡಗ ಗ್ರಾಮದ ಹೇರ್ಮಾಡು ದೇವಸ್ಥಾನದಿಂದ 4 ಫರ್ಲಾಂಗು ದೂರದಲ್ಲಿ 15—73 ಸೆಂಟಿನ ಸಾಗಿನ ನೀರಾವರಿ ಭೂಮಿ ಮತ್ತು 61—84 ಸೆಂಟಿನ ಕಾಫಿ, ಕೆತ್ತೆ, ಮೆಣಸು ಬಾಳೆ ವಗೈರೆಗೆ ಅಕಯಂಕ್ಕಾದಿ ಬಾಣೆ ಮತ್ತು 500 ಏಕರೆ ಮೆಣಸು ತೋಟ ಸಹ ಮೂರಾಕ್ಕಿದೆ ಗಾಡಿ ಎಲ್ಲಾ ಸ್ಥಳಗಳಲ್ಲೂ ತಿರುಗುತ್ತಿ. 1500 ರೂಪಾಯಿಗಳಿಗೆ ಈ ಆಸ್ಮಿಯನ್ನು ವಿಕ್ರಯಿಸಲ್ಪಡುತ್ತೆ. ಖರೀದಿಸ್ಥರು ಈ ಕೆಳಗಿನ ಅಡ್ರೆಸ್ಸಿಗೆ ಬಂದು ತಿಳಿದುಕೊಳ್ಳುವದು.

ಯಂ. ಆರ್. ಜೋಟುಸಿಂಗ್,
C/o. ಪಿ. ಯಂ. ಪೊನ್ನಪ್ಪ,
ಇನ್‌ಸ್ಪೆಕ್ಟರ್,
ಕೋ-ಆಪರೇಟಿವ್ ಸೊಸೈಟಿ,
ಪೊನ್ನಂಪೇಟೆ,

ಪತ್ರವ್ಯವಹಾರ.

[ಜಾಹೀರಾತುದಾರರು ಪಡುವ ಅಭಿವ್ಯಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಕಾಫಿ ಪ್ಲಾಂಟರುಗಳ ಸ್ಥಿತಿ.

ಕಾಫಿಗೆ ಒಳ್ಳೆ ಧಾರಣೆ ದೊರೆಯುವದೆಂಬ ಕುತೂಹಲಕ್ಕೆ ಪರಿಸಮಾಪ್ತಿಯಾಂಬಂತೆ ತೋರುತ್ತೆ. ಇನ್ನು ಹೆಚ್ಚಿನ ಆಸೆ ಏನೂ ಇಲ್ಲ. ಇನ್ನು ಕಾಫಿ ಬೆಳೆಯುವವರು ತಮ್ಮ ಸಹಾಯಕ್ಕೆ ಕೂಡಗು ಸಂಕಾರದ ಕಡೆ ನಿರೀಕ್ಷಿಸಬೇಕಾಗಿದೆ. ಅವರು ಕಾಫಿ ಬೆಳೆಯುವವರಿಗೆ ಯಾವ ರೀತಿಯಲ್ಲಿ ತಕ್ಕ ಸಹಾಯವನ್ನೀಡುವರೋ ಎಂಬ ಕುತೂಹಲವು ಹೆಚ್ಚುತ್ತಲಿದೆ. ೨೦ ತಿಂಗಳ ಹಿಂದೆ ಸ್ಥಳೀಯ ಸಂಕಾರದವರು ಕಾಫಿ ಪ್ಲಾಂಟರುಗಳ ಆರ್ಥಿಕ ಸ್ಥಿತಿಯ ವಿಚಾರವಾಗಿ ವಿವರಗಳನ್ನು ಅಪೇಕ್ಷಿಸಿದರಂತೆ ಆಂತೆಯೇ ಆ ವಿವರಗಳು ಸಂಗ್ರಹಿಸಲಾಗಿ ಸರಕಾರದವರಿಗೆ ಒಪ್ಪಿಸಲಾಗಿದೆ.

ಕಳೆದ ಕೌನ್ಸಿಲು ಅಧಿವೇಶನದಲ್ಲಿ ಕೊಡಗು ಕಮಿಷನರವರು ಕಾಫಿ ಬೆಳೆಯುವವರ ಸಹಾಯಕ್ಕಾಗಿ ಕೇಂದ್ರ ಸರಕಾರದಿಂದ 7 ಲಕ್ಷ ರೂಪಾಯಿಗಳು ಬರಬಹುದೆಂದು ತಿಳಿಸಿದರು. ಆದರೆ ಆದರ ವಿಚಾರವಾಗಿ ಈಚೆಗೆ ಏನೊಂದು ಪ್ರಸ್ತಾಪನೇ ಇಲ್ಲ. ಈ ಬಗ್ಗೆ ಕಾಫಿ ಗ್ರೋವರ್ಸ್ ಸಂಘದವರೂ ಸಹ ಪ್ರಯತ್ನಿಸುತ್ತಿರುವರಾಗಿ ತಿಳಿಯುತ್ತೇನೆ. ಏನಾದರೊಂದು ಸಹಾಯವು ಬರುವಂತಿದ್ದರೆ ಅದು ಒಡನೆ ಬರಬೇಕು ಸುಕಾಲದವರು ಈ ಸಂದಿಗ್ಧ ಸಮಯದಲ್ಲಿ ಕಾಫಿ ಪ್ಲಾಂಟರುಗಳ ಸಹಾಯಕ್ಕೆ ಬಾರದಿದ್ದಲ್ಲಿ ಖಂಡಿತವಾಗಿಯೂ ಪ್ಲಾಂಟರುಗಳ ತೋಟಗಳು ಕಾಡುಗಳಾಗಿ ಪರಿವರ್ತಿಸುವದನ್ನು ನೋಡಲು ಹೆಚ್ಚು ಸಮಯ ಬೇಕಾಗುವದಿಲ್ಲ.

ಈ ಪತ್ರಿಕೆಯ ಮೂಲಕ ನಾನು ಕೊಡಗು ಕಮಿಶನರವರಿಗೆ, ಆವಶ್ಯವಾದದ್ದನ್ನು ಮಾಡಿ ಪ್ಲಾಂಟರುಗಳನ್ನು ಪಾರುಮಾಡಬೇಕಾಗಿ ಬಿನ್ನವಿಸಿಕೊಳ್ಳುತ್ತೇನೆ.

ಸರಕಾರವು ಹಣದ ರೂಪದಲ್ಲಿ ಕೊಡಬಹುದಾದ ಸಹಾಹಾಯಕ್ಕೆ ಭದ್ರತೆಯೆಲ್ಲಿ ಎಂಬ ಸಂಶಯವಿರಬಹುದು. ಆದರೆ ಆ ಪ್ರಶ್ನೆಯು ದೀರ್ಘ ಕಾಲಿನ ಸಾಲ ಕೊಡುವದಾತರೆ ಮಾತ್ರ ಗಮನಿಸಕ್ಕ ವಿಷಯ. ಈಗ ಸದ್ಯಕ್ಕೆ ಫಸಲುಗಳ ಮೇಲೆ ಸಾಲಗಳನ್ನು ಕೊಟ್ಟು ಮುಂದಿನ ವರ್ಷದ ಫಸಲಿನಿಂದ ತಮ್ಮ ಹಣ ಭರ್ತಿ ಮಾಡಿಕೊಳ್ಳಬಹುದು.

ಈ ವಿಷಯದಲ್ಲಿ ಸಂಬಂಧಪಟ್ಟವರೂ ಸರಕಾರದವರೂ ಮತ್ತು ಕೌನ್ಸಿಲು ಮೆಂಬರುಗಳೂ ಹೆಚ್ಚು ಶ್ರದ್ಧೆ ವಹಿಸಿ ಮುಳುಗುತ್ತಲಿರುವ ಪ್ಲಾಂಟರುಗಳನ್ನ ಉದ್ಧರಿಸಬೇಕು ಸರಕಾರದವರು ತಮ್ಮಿಂದ ಸಿಗಬಹುದಾದ ಸಹಾಯವನ್ನು ಒಡನೆ ತಿಳಿಸಿ ಸಹಾಯದ ನಿರೀಕ್ಷಣೆಯಲ್ಲಿರುವ ಪ್ಲಾಂಟರುಗಳ ಮನಸ್ಸನ್ನು ಸಮಾಧಾನಪಡಿಸಬೇಕು.

ಒರ್ವ ಪ್ಲಾಂಟರು.

ಕೊಡಗಿನಲ್ಲಿನ ಸಮೂಜ ಸುಧಾರಕರು.

ಅಬಿಸೀನಿಯರನ್ನು ನಾಗರೀಕರನ್ನಾಗಿ ಮಾಡುವ ನೆಪದಿಂದ ಆರೇಳು ತಿಂಗಳುಗಳಿಂದ ನಾಗರೀಕ ರೀತಿಯಿಂದ ಅಂದರೆ ವಿಷಗಾಳಿಗಳ ಬಾಂಬು, ಡಿಸ್ಟ್ರಾಸ್‌ನರ ಮೇಲೆ ಬಾಂಬು, ಆಕಾಶ ವಿಮಾನದಿಂದ ರಕ್ಷಿಸಲ್ಪಡದ ಜನರ ಮೇಲೆ ಮೆಶಿನ್ ಗನ್ನಿನ ಗುಂಡಿನ ಸುರಿಮಳೆ, ಒಪ್ಪಂದಗಳನ್ನ, ಯುದ್ಧ ನೀತಿಯನ್ನ ಮೂಲೆಗೊತ್ತಿ ಅತೀ ನಾಗರೀಕರೆಂದು ಕರೆಯಲ್ಪಡುವ ಇಟೆಲಿಯವರು ಅಬಿಸೀನಿಯರನ್ನು ನಾಶಪಡಿಸಿದ ರೀತಿ ಕೆಲವು ವರ್ಷಗಳಿಂದ ಕೊಡಗಿನ ಹೊಂಗಾ ಮತ್ತ ಒಳಗೂ ಇರುವ ನಮ್ಮ ಜನರಾಂಗದ ವಿಶ್ವವಿದ್ಯಾಲಯದ ಧುರೀಣ ಶತ್ವಜ್ಞಾನಿ ಸಹಕಾರಿ ಪಂಡಿತರು ಸ್ವತಂತ್ರವೆಂಬುವ ಅಮೃತವನ್ನು ಧರಿಸಿ ಕೊಡವ ಜನರಾಂಗವನ್ನ ನಾಗರೀಕರನ್ನಾಗಿ ಮಾಡಲು ಸ್ವಇಚ್ಛೆಯಿಂದ ವರ್ತಿಸಲು ಕೈಹಚ್ಚಿರುವರು. ಇವರ ಈ ಮತ್ತನೆಯು ಈಗೀಗ ಜನರಾಂಗವನ್ನೇ ನಾಶಪಡಿಸುತ್ತೆಂಬ ಭೀತಿಯು ಹಲವು ಸ್ವಾಭಾವಿಕವಾಗಿ ಸ್ವಲ್ಪ ಜನರಲ್ಲಿ ಹುಟ್ಟಿರುತ್ತೆ. ಈ ಸುಧಾರಕರು ಶುಭಶೋಭನಗಳನ್ನು ಪಟ್ಟಣಗಳಲ್ಲಿನ ಬಾಡಿಗೆ ಮತ್ತು ಇತರ ಮನೆಗಳಲ್ಲಿ, ದೇವಸ್ಥಾನಗಳಲ್ಲೂ ನಡೆಸಲು ಸುಲಭ ಮಾಡಿಕೊಟ್ಟರು. ಈ ಅಂಟು ಜಾಡ್ಯವು ಸುಪಕ್ಕದಿಂದ ಗ್ರಾಮಗಳಲ್ಲಿ ಕೆಲವನ್ನೂ ಅವರಿಸಿಕೊಂಡಿರುತ್ತೆ. ಇವರ ಮತವು ಮನಸೋ ಇಚ್ಛೆ ನಡೆಯಬೇಕನ್ನುವ ಪ್ರಾಣಿಯ ಸಾಮೂಹಿಕ ಸಿದ್ಧಾಂತಗಳು ಇರಿಗೆ ಹಿತಕರವಲ್ಲ. ಬಲಹೀನರನ್ನ ಕಾಪಾಡಿಕೊಳ್ಳಲ್ಲ. ಹಣಕ್ಕಾಗಿ ಏನೂ ಮಾಡಬಲ್ಲರು. ಇವರ ವಿದ್ಯೆಗೂ, ಅಭಿವೃದ್ಧಿಗೂ ಸಹಾಯ ಮಾಡಿದ ತಂದೆ ತಾಯಿಯರು, ಅಂಣ ತಮ್ಮಂದಿರು, ಅಕ್ಕತಂಗಿಯರು, ಒಂದು ಒಳಗವ್ವು, ಓದಲಿಕ್ಕೆ ಸಹಾಯ ಮಾಡಿದ ಇಷ್ಟಮಿತ್ರರು ಇವರ ಹುಟ್ಟು ಊರು ಮತ್ತು ಪುರಾತನ ಹುಟ್ಟು ಮನೆಗಳೂ ಬೇಕಿಲ್ಲ. ಇವೆಲ್ಲ ಅನಿಷ್ಯಕರ. ಯಾಕೆಂದರೆ ಇವರ ವಿದ್ಯೆಗೆ ಖರ್ಚು ಮಾಡಿದ ಇವರ ಕುಟುಂಬಸ್ಥರು, ಊರವರು, ಇವರು ವಿದ್ಯಾವಂತರಾಗಿ ಬರುತ್ತಾರೆಂದು ಅರಿತು ಗ್ರಾಮಗಳಲ್ಲು ಪಂದ್ಯಾಟದ ಮೈದಾನಗಳನ್ನು ಟೆನ್ನಿಸ್ ಮತ್ತು ಕ್ರಿಕೆಟ್ಸ್ ಏರ್ಪಡಿಸಿ ರೀಡಿಂಗ್ ರೂಮುಗಳನ್ನು ಏರ್ಪಡಿಸಿ ಮೋಟಾರ್ ಕಾರು ಬಂದಲು ನ್ಯಾಯವಾದ ರಸ್ತೆಗಳನ್ನು ಏರ್ಪಡಿಸಲಿಲ್ಲ. ಇದೆಲ್ಲ ಖಂಡಿತವಾಗಿಯೂ ಇವರಿಗೆ ವಿದ್ಯೆ ಕಲಿಯಲು ಶಕ್ತಿ ವಿರಂದ ಸಹಾಯ ಮಾಡಿದ ಕುಟುಂಬಸ್ಥರ ಒಂದು ಬಳಗ ಕಲಾಭಿವೃದ್ಧಿಗಳ ತಪ್ಪಲ್ಲವೇ! ಈ ಧುರೀಣರ ಇನ್ನೊಂದು ಅಭಿವ್ಯಾಯಕ್ಕೆ ಏನನ್ನುವರಿ. ನಮ್ಮ ಸಮೂಜದ ಹಳೇ ನಡವಳಿಕೆಗಳೂ, ಗ್ರಾಮಗಳಲ್ಲಿನ ನಮ್ಮ ಹಿರಿಯರು ಕಟ್ಟಿಸಿದ ಪುರಾತನ ಕಾಲದ ಭವನಗಳೆಲ್ಲ ನಮ್ಮ ಹಿರಿಯರ ಕಾಲದ ಸ್ಥಿತಿಗಳಿಗೆ ಅನುಕೂಲವಾದವುಗಳೇ ವಿನಹ ಈಗ ಅವೆಲ್ಲ ಸಮೂಜದ ನೋಲ್ಮೆಗೆ ಸಹಾಯಕವಾದವುಗಳಲ್ಲವಂತೆ. ಅವಶ್ಯವಿದ್ದಪಕ್ಷ ಇವರ ವಿದ್ಯೆಗೆ ಖರ್ಚು ಮಾಡಿದ ಅನಾಗರೀಕರು ಅವರ ಪ್ರಯೋಜನಕ್ಕಾಗಿ ಕಾವಾಡಿಕೊಳ್ಳಬಹುದು. ಆದರೆ ಗ್ರಾಮಗಳ ಇವರ ಪಾಲಿನ ಭೂಮಿಯ ಉತ್ಪತ್ತಿಯನ್ನು ಮಾತ್ರ ಕೆಗೆದುಕೊಂಡು ಹೋಗಲು ಹಕ್ಕು ಇವರಿಗೆ ಇರುತ್ತೆ.

ಈ ವಿದ್ಯಾವಂತರಲ್ಲಿ ಕೆಲವರು ಈ ಬಿಕ್ಕಟ್ಟಿನ ಕಾಲದಲ್ಲು ಕಮ್ಮಿ ಖರ್ಚಿನಿಂದ ವಿವಾಹಗಳನ್ನು ನಡೆಸಲು, ಪಟ್ಟಣಗಳಲ್ಲಿ ನಡೆಸುವದಾಗಿದೆಂದನ್ನುವರು. ಗ್ರಾಮಗಳಲ್ಲು ಕೊಡುವ ಪದ್ಧತಿ ಮೇರೆ ಒಹಳ ಕಮ್ಮಿ ಖರ್ಚಿನಿಂದ ಶುಭ ಶೋಭನಗಳನ್ನು ನಡೆಸಲು ಯಾವ ಅಡಚಣೆಯೂ ಇಲ್ಲ. ಆದರೆ ಈ ತತ್ವಗಳನ್ನು ಮುಂದಕ್ಕಿಟ್ಟುಕೊಂಡು ಪಟ್ಟಣಗಳಲ್ಲಿ ಶುಭ ಶೋಭನಗಳನ್ನು ನಡೆಸುವಿಂಥ ಖರ್ಚಿ ಮದುವೆ ಕಾರ್ಯ ಮಾಡುವಲ್ಲಿಂದ ಶುಕ್ಲಪಕ್ಷದ ಚಂದ್ರನಂತೆ ಏರುತ್ತಲಿರುವದು ಆದರ ಈ ಸುಧಾರಕರು ಉದ್ಯೋಗದಲ್ಲು ಮತ್ತು ಹಣಗಾರಿಕೆಯಿಂದ ಕೂಡಿಸಿಕೊಂಡಿರುವ ಕಂಪನಿ ಲಾಭ ನಷ್ಟದ ಲೆಕ್ಕವನ್ನು ನೋಡಿದರೆ ಲಾಭವೇನೋ ಇರುತ್ತೆ. ಈ ವಿಷಯದಲ್ಲಿ ಬೇಕಾದಷ್ಟು ಬರೆಯಬಹುದು. ಹುಚ್ಚನೆಂದು ಕರೆಸಿಕೊಳ್ಳಲೂ ಒಹುದು. ಆದರೆ ಈ ಸುಧಾರಕರು ಮುಂದುಬರಿಯಂತೆ ಹೋದ ಹಾಗೆ ದೇಶವು ಕ್ಷಯವಾಗುತ್ತೆ ಬಂತ್ತಲಿದೆಂಬುವದನ್ನು ಯಾರಿಂದಲೂ ಪರೋಧಿಸಲಂತಂದು ನನಗೆ ಭಾವನೆ ಕಂಡಿತ್ತೆ. ಇವೆಲ್ಲ ಸಾಲದಕ್ಕೆ ಈ ಸುಧಾರಕರಿಗೆ ಕುಟುಂಬದವರ್ಲ್ಲ ಯಾರಿಂದಲೂ ವ್ಯತಿಕಪಟ್ಟ ವಿವಾಹವು ಮಟ್ಟಿಗೆ ಮಾತ್ರ ಸೂತಕವೆಂದೂ, ಬೇರೆ ಮನೆಗಳಲ್ಲು ಶುಭ ಶೋಭನಗಳನ್ನು ನಡೆಸಬಹುದೆಂದೂ ಇನ್ನು ಕೆಲವು ಸತ್ತ ಮೂರು ದಿನಗಳಲ್ಲು ಸೂತಕವಾಗುವದೆಂಬಂಥ ನಂಬಿಕೆಗಳನ್ನು ಮಾಡುತ್ತಿರುವರು. ಇಂಥ ಮಾತ್ಸರ್ಯವನ್ನು ಹಿಂಬಲಿಸುವವರು. ಮಾತ್ಸರ್ಯವಲ್ಲು ಕೂಡ ಅಸ್ಪೃಶ್ಯ ವ್ಯತಿಕಪಟ್ಟರ ಕಲವು ದಿವಸಗಳ ಮುಂದಾಗಿ ವಿವಾಹ ಮಾಡಿದ ಎಲ್ಲಿ ಕೆಲಸಗಳನ್ನು ಕೂಡ ಬಿದ್ದ ಮಾಡುತ್ತಾರೆ ವುದು ಪತ್ರಿಕೆಗಳಲ್ಲು ನಾವು ಓದುತ್ತಿರುವುದು. ಮೊನ್ನೆ ತಾನೇ ನಮ್ಮ ಮನೆಯಲ್ಲು ಸುಮಾರು 27 ವರ್ಷ ವಯ್ಯಸ್ಸಿದ ಯುವ್ವನಸ್ಥನು ವ್ಯತಿಕಪಟ್ಟರುವಾಗ್ಯೆ ಕುಟುಂಬಸ್ಥರು ಸೇರಿದ್ದೂ ಕೂಡ ಮಡಿಕೇರಿಯಲ್ಲು ಒಂದು ವಿವಾಹವು ನಡಿಸಲ್ಪಟ್ಟಿತು. ಇದು ಬಹಳ ಶೋಚನೀಯವಾದ ಸರಿಗತಿಯಾಗಿರುತ್ತೆ ಇನ್ನು ಮುಂದೆ ತಂದೆ ಸತ್ತರೆ ಮಗನು ದಾರಾಳ 2—3 ದಿನಗಳಲ್ಲು ಮದುವೆ ಮಾಡಲು ಅವಕಾಶ ಕೊಟ್ಟಂತೆ ಉದಾರಣೆಯಾಗುವುದು. ಅದಲ್ಲೂ ಆ ಮದುವೆಗೆ ಕೂಡವರು ಕುಟುಂಬದಲ್ಲು ಸೂತಕವಿರುವದನ್ನು ಅರಿತು ಕೂಡ (ವ್ಯತಿಕಪಟ್ಟದ್ದು ಮಡಿಕೇರಿ ಆಸ್ಪತ್ರೆಯಲ್ಲು) ಮದುವೆಗೆ ಹೋದದ್ದು ಮತ್ತಷ್ಟೂ ವ್ಯಸನಕರವಾದ ಸುಗತಿಯಾಗಿರುತ್ತೆ. ಈ ಸುಧಾರಕರು ಅನೇಕ ವಿಷಯಗಳಲ್ಲು ಮಹಾತ್ಮರನ್ನು ಮುಂದಿಡುವರು. ಮಹಾತ್ಮರು ನಮ್ಮ ಪದ್ಧತಿಗಳನ್ನು ಬಿಡುತ್ತಾ ಬರುವದು ಇಳಿತದ ಲಕ್ಷಣವಾಗಿರುತ್ತೆಂದು ಹೇಳಿದ್ದು ಇವರ ಆಶಾವಗಾನಕ್ಕೆ ಬಂದಿದ್ದು ವ್ಯಸನಕರ. ಹೇಗೂ ನಮ್ಮ ಕೊಡವ ಜನರು ಹೇಗೆ ನಮ್ಮ ಪದ್ಧತಿಗಳನ್ನೂ ಮನೆ ವಿಚಾರಗಳನ್ನ ಕಾಪಾಡುವರೆಂಬ ವಿಷಯ ನಿಗಾಕೊಡುವ ಸಂಗತಿಯಾಗಿರುತ್ತೆ. ಸಾಮಾನ್ಯ ಜನರಾಂಗವು ಖಂಡಿತವಾಗಿಯೂ ಒಂದೆರಡು ತಲೆಯಲ್ಲಿ (generation) ನಿರ್ನಾಮವಾಗಿ ದೇಶವು ಕ್ಷಯವಾಗುವದು ಖರೆ. ನಮ್ಮ ಹಳೇ ಪದ್ಧತಿಗಳ ಉದ್ದೇಶ್ಯವನ್ನೂ ಯೋಚನೆಯನ್ನು ನಮ್ಮ ನಮ್ಮ ಮನೆಗಳಲ್ಲೇ ಶುಭಶೋಭನಗಳನ್ನು ನಡೆಸುವದು ಅನಿಷ್ಯವೆಂದೂ ಬರುವ ಸಂಚಿಕೆಯಲ್ಲಿ ವಿವರಿಸುವೆನು.

ಬಿದ್ದಂಡ ಯಂ. ಕಾರ್ಯಪ್ಪ.

ಡಾ. ಅನ್ಸಾರಿಯವರು ನಿಧನರಾದರು.

ಹಿಂದೂ—ಮುಸ್ಲಿಂ ಬಾಂಧವ್ಯದ ಕುರುಹು ಮಾಯವಾಯಿತು.

ಭಾರತದ ಅಧಾರ ಸ್ತಂಭವೇ ಮುರಿದು ಬಿತ್ತು.

ಮುಸ್ಸೂರಿಯಿಂದ ದೆಹಲಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿರುವಾಗ ಈ ತಾರೀಕು 10 ರ ಸಂಧ್ಯಾ ರಾತ್ರಿ ಡಾ. ಅನ್ಸಾರಿಯವರು ನಿಧನರಾದರು. ದೆಹಲಿ ನಗರಕ್ಕೆ 8 ಮೈಲು ದೂರದಲ್ಲಿರುವ 'ಜಮಿಯ ಮಿಲಿಯ' ಎಂಬ ಸಂಸ್ಥೆಯಲ್ಲಿ ಅವರ ದೇಹವನ್ನು ತಾರೀಕು 11—5—1936 ರ ಮಧ್ಯಾಹ್ನ 2—45 ಗಂಟೆಗೆ ಸಮಾಧಿಮಾಡಲಾಯಿತು.

ವಿವರಗಳು.

ಕಳೆದ ಶುಕ್ರವಾರ ಡೆಹರಾಡೂನಿಗೆ ಪ್ರಯಾಣ ಬೆಳೆಸಿದ್ದರು. ರಾಂಪುರದ ನವಾಬರನ್ನು ನೋಡಲೋಸುಗ ಮುಸ್ಸೂರಿಗೆ ಪ್ರಯಾಣ ಮಾಡಿದ್ದರು. ಅಲ್ಲಿ ಒಂದು ದಿನವೆಲ್ಲ ಕೆಲಸ ಕಾರ್ಯದಲ್ಲಿ ನಿರತರಾಗಿ ದೆಹಲಿಗೆ ಪ್ರಯಾಣ ಮಾಡುತ್ತಿದ್ದರು. ಮಧ್ಯರಾತ್ರಿ ಹೊತ್ತಿನಲ್ಲಿ ತಾವು ಕಳಿತ ಕೊಂಡಿದ್ದ ಗಾಡಿಗೆ ತಮ್ಮ ಸೇವಕನನ್ನು ಬಂಮಾಡಿಕೊಂಡರು. ತವಗೆ ನೋವಾಗುತ್ತಿರುವುದಾಗಿಯೂ ಔಷಧಿಬೇಕೆಂದೂ ಕೇಳಿದರು. ಸೇವಕನು ಔಷಧಿಯನ್ನು ಮಾಡಿಕೊಟ್ಟು ಅವರ ಬೆನ್ನನ್ನು ಜೆನ್ನಾಗಿ ಉಜ್ಜಿದನು. ಔಷಧಿಯನ್ನು ತೆಗೆದುಕೊಂಡ ತರುವಾಯ ಡಾ. ಅನ್ಸಾರಿಯವರು ಕ್ಷೀಣ ಸ್ವರದಲ್ಲಿ 'ನಾನು ಜೀವಿಸಬೇಕೆಂದಿದ್ದೇನೆ ಆದರೆ ಮರಣವು ನಿಶ್ಚಿತವಾಗಿದೆ.' ಎಂಬುದಾಗಿ ತಿಳಿಸಿದರು. ಇಷ್ಟು ಸಂಭಾಷಣೆಮಾಡಿದ ತರವಾಯ ಒಂದು ಗಂಟೆಯ ಮೇಲೆ ಡಾ. ಅನ್ಸಾರಿಯವರು ಜೈನ್ ಪುರಸಾನ್ ಎಂಬ ಸ್ಟೇಶನಿನ ಒಳಿ ವಿಧಿವಶರಾದರು.

ಕೆಲವು ಕಾಲದಿಂದೀಚೆಗೆ ಡಾ ಅನ್ಸಾರಿಯವರ ಪ್ರಕೃತಿಯು ಸರಿಯಾಗಿರಲಿಲ್ಲ. ಲಕ್ನೋ ಕಾಂಗ್ರೆಸಿಗೆ ಹೋಗಿಬಂದ ಮೇಲೆ ತನಗೆ ಬಹಳ ಆಯಾಸವಾಗಿರುವುದಾಗಿ ತಿಳಿಸಿದ್ದರು. ಅಲ್ಲದೆ ವಿಪರೀತವಾದ ಸೆಕೆಯೆಂದು ಹೇಳುತ್ತಿದ್ದರು. ರಕ್ತದ ವಿಶೇಷ ಒತ್ತಾಟವಿಂದ ಅವರು ಆಗಾಗ್ಗೆ ನರಳುತ್ತಿದ್ದರು.

ಮಹಾತ್ಮ ಗಾಂಧಿಯವರಂದ ಈ ತಾ. 10 ರಲ್ಲು ಅವರಿಗೆ ಒಂದು ಪತ್ರ ಬಂದಿತ್ತು. ಗಾಂಧಿಜೀ ಯವರು ಒಬ್ಬ ರೋಗಿಯನ್ನು ವಾರ್ಧಾ ನಗರದಿಂದ ಅವರ ಬಳಿಗೆ ಕಳುಹಿಸಿಕೊಟ್ಟಿದ್ದರು.

ಜೀವನ ಪರಿಚಯ.

ಡಾ. ಮುಕ್ತಾರ್ ಅಹಮದ್ ಅನ್ಸಾರಿಯವರು 1880 ರಲ್ಲಿ ಜನ್ಮವೆತ್ತಿದರು. ಆಗ್ರಾ ಅಯೋಧ್ಯ ಸಂಸ್ಥಾನದ 'ಘಾಟಿ' ಪ್ರಾಂತ್ಯ ಅವರು ಜನ್ಮವೆತ್ತಿದ ಸ್ಥಳ ಅಲಹಾಬಾದಿನಲ್ಲಿರುವ ಮ್ಯೂರ್ ಸೆಂಟ್ರಲ್ ಕಾಲೇಜಿನಲ್ಲಿಯೂ, ಹೈದರಾಬಾದಿನಲ್ಲಿರುವ ನಿಜಾಮರ ಕಾಲೇಜಿನಲ್ಲಿಯೂ ಅವರು ಉಚ್ಚ ಶಿಕ್ಷಣ ಪಡೆದರು. 1900 ರಲ್ಲಿ ಅವರು ಪದವೀಧರರಾದರು. 1901 ರಲ್ಲಿ ಎಡಿನ್‌ಬರೋ ವಿಶ್ವವಿದ್ಯಾನಿಲಯವನ್ನು ಸೇರಿದರು. ಯಂ. ಬಿ ಸಿ. ಹೆಚ್. ಬಿ. ಯಂ. ಆರ್. ಸಿ ಪಿ. (ಕಂಗ್ಲೆಂಡ್) ಮತ್ತು ಎಲ್. ಆರ್. ಸಿ. ಪಿ. (ಲಂಡನ್) ಡಿಗ್ರಿಗಳನ್ನು 1905 ರಲ್ಲಿ ಪಡೆದರು. ಲಂಡನಿನಲ್ಲಿರುವ ಚೆಲ್ಸಿಂಗ್ ಕ್ವಾಸ್ ಆಸ್ಪತ್ರೆಯಲ್ಲಿ 'ಹೌಸ್ ಸರ್ಜನ್' ಆಗಿ ನಿಯುಮಿಸಲ್ಪಟ್ಟರು. ಅನಂತರ ಲಂಡನಿನ 'ಲಾಕ್' ಆಸ್ಪತ್ರೆಯಲ್ಲಿ ರೆಸಿಡೆಂಟ್ ಮೆಡಿಕಲ್ ಆಫೀಸರಾದರು. ಅಲ್ಲದೆ ಲಂಡನಿನಲ್ಲಿರುವ ಸೆಂಟ್ ಪೀಟರ್ಸ್ ಆಸ್ಪತ್ರೆಯಲ್ಲಿ 'ಕ್ಲಿನಿಕಲ್ ಅಸಿಸೆಂಟ್' ಸಹ ಆಗಿದ್ದರು. ಯೂರೋಪಿನಲ್ಲಿ 10 ವರ್ಷ ಕಾಲ ವಿದ್ದ 'ಡಾಕ್ಟರ್ ಆಫ್ ಮೆಡಿಸನ್' ಪದವಿಯನ್ನು, ಎಡಿನ್‌ಬರೊ (ವಿಶ್ವವಿದ್ಯಾನಿಲಯ) ದ 'ಮಾಸ್ಟರ್ ಆಫ್ ಸರ್ಜರಿ' ಪದವಿಯನ್ನೂ ಸಂಪಾದಿಸಿಕೊಂಡು ಇಂಡಿಯಾ ದೇಶಕ್ಕೆ ಹಿಂತಿರುಗಿದರು.

1912—13 ರಲ್ಲಿ ತುರ್ಕಿ ದೇಶಕ್ಕೆ ಅಖಿಲ ಭಾರತ ವೈದ್ಯ ಸಹಾಯ ಸಮಿತಿಯನ್ನು ಕಳುಹಿಸಿಕೊಡಲು ಬಹಳ ಸಹಾಯ ಮಾಡಿದರು 1917—18 ರಲ್ಲಿ ನಡೆದ 'ಹೋಂ ರೂಲ್' ಚಳವಳಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. 1920 ರಲ್ಲಿ ಅಖಿಲ ಭಾರತ ಮುಸ್ಲಿಂ ಲೀಗಿನ ಅಧ್ಯಕ್ಷರಾದರು. 1922 ರಲ್ಲಿ ಗಯದಲ್ಲಿ ನಡೆದ ಖಿಲಾಫತ್ ಸಮ್ಮೇಳನದಲ್ಲಿ ಇವರು ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದರು.

ಕಾಂಗ್ರೆಸ್ ಅಧ್ಯಕ್ಷ ಪದವಿ.

1927 ರಲ್ಲಿ ಮದ್ರಾಸಿನಲ್ಲಿ ನಡೆದ ಕಾಂಗ್ರೆಸ್ ಮಹಾಸಭೆಯ 42ನೇ ಅಧಿವೇಶನದ ಅಧ್ಯಕ್ಷಪದವಿಯನ್ನು ಅಲಂಕರಿಸಿದ್ದರು. 1928 ರಲ್ಲಿ ಕಲ್ಕತ್ತದಲ್ಲಿ ನಡೆದ ಸರ್ವ ಪಕ್ಷಗಳ ಸಮ್ಮೇಳನದಲ್ಲಿಯೂ ಇವರೇ ಅಧ್ಯಕ್ಷರಾಗಿದ್ದರು.

1931 ರಲ್ಲಿಯೂ 1932 ರಲ್ಲಿಯೂ ನಡೆದ ಶಾಸನ ಭಂಗ ಚಳವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸಿದ್ದರು. 1934—35 ರಲ್ಲಿ ಕಾಂಗ್ರೆಸ್ ವರ್ಕಿಂಗ್ ಬೋರ್ಡ್ ಸ್ಥಾಪಿತವಾದಾಗ ಡಾ ಅನ್ಸಾರಿಯವರು ಆ ಬೋರ್ಡಿನ ಅಧ್ಯಕ್ಷರಾಗಿದ್ದರು.

ಡಾ. ಅನ್ಸಾರಿಯವರು ಕಾಂಗ್ರೆಸಿನ ಅನುಪಮ ಭಕ್ತರು. ಮಹಾತ್ಮರ ಜೀವಿತಗೆಳೆಯರು. ಅಲ್ಲದೆ ಅವರು ಡಾಕ್ಟರಾಗಿದ್ದರು ಮಹಾತ್ಮರು ಪುಣೆಯಲ್ಲಿ ಸುದೀರ್ಘವಾದ ನೃತನನ್ನು ಕೈಕೊಂಡಿದ್ದಾಗ ಅವರ ದೇಹಸ್ಥಿತಿಯನ್ನು ಪರೀಕ್ಷಿಸುವುದಕ್ಕಾಗಿ ಡಾ ಅನ್ಸಾರಿಯವರು 'ಎರವೇಡ್ಡಿನಿಂದ' ಬೇಹಳಿಯಿಂದ ಬಂದಿದ್ದರು.

ಕಾಂಗ್ರೆಸ್ ಶಾಸನಭಂಗ ಚಳವಳಿಯನ್ನು ನಿಲ್ಲಿಸಿ ಶಾಸನ ಸಭಾಸ್ಪರ್ಧೆಗೆ ಅವಕಾಶ ಮಾಡಿಕೊಡಲು ಚಳವಳಿ ಹೋಗಬೇಕೆಂಬ ನಿರ್ಧಾರವು ಕಾರ್ಯಕಾರಿ ಸಮಿತಿಯಲ್ಲಿ ಡಾ ಅನ್ಸಾರಿಯವರು ಪ್ರಮುಖ ಪಾತ್ರವನ್ನು ವಹಿಸಿದ್ದರು. ಇವರೂ ಡಾ. ಬಿ ಸಿ. ರಾಯ್ ಮುಂತಾದ ಹಲವು ಮಹನೀಯರು ಶಾಸನ ಸಭಾಸ್ಪರ್ಧೆ ಮಾಡಿ ಚಳವಳಿ ನಡೆಸಬೇಕೆಂದು ನಿರ್ಧರಿಸಿ ಮಹಾತ್ಮ ಗಾಂಧಿಯವರ ಬಳಿಗೆ ನಿಯೋಗ ಗೋಷ್ಠಿ ಹೋಗಿ ಅವರ ಕಾರ್ಯವನ್ನು ಸಾಧಿಸಿದರು. ಈಚೆಗೆ ಅವರ ದೇಹಸ್ಥಿತಿಯು ಕೆಟ್ಟಲು ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟರು.

ಡಾ. ಅನ್ಸಾರಿಯವರಿಗೆ ಒಬ್ಬ ಪತ್ನಿಯೂ, ಸಾಕಷ್ಟಿರುವ ಇಬ್ಬರು ಕುವರಿಯರೂ, ಅಣ ಮಕ್ಕಳೂ ಮತ್ತು ಇತರ ಬಂಧುಗಳೂ ಇವರ್ತಾರೆ.

SHIROMANI NARAYANACHARYA

Choukhamba Benares City.

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅವಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀವಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವಿದ್ಯವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುದು ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ಕಣಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 10ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿತ್ತಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,

52—37 ಚೌಖಂಬಾ ಬೆನಾರಿಸ್, (ಕಾಶೀ)

ಮಾರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನೂ ಇದೇಕಂದು ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘಗಳು ಮತ್ತು ದವಸ ಭಂಡಾರದ ಸುನಿಬಂಧನೆಗಳೂ, ನಾಸ್ ಒಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೇಸುಗಳನ್ನು ಕೈಯ್ಯಕ್ಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸೆಕ್ರೇರ್ ಕೀಪರ್ ಖರಾರು ಫಾರಮುಗಳೂ ಓವರ್ಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ರಿಜಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಬರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಬರುಗಳಿಗೆ ಏಜೆಂಟ್‌ಗವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ಯಾವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಏಜೆಂಟರ ಮೂಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೈಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು,
ಪೊನ್ನಂಪೇಟೆನಾಡು—ಮೆ. ಸಿ. ಜೆ. ಮುದ್ದಯ್ಯನವರು
ಹುದಿಕೇರಿ & ತಿತಿಮತ್ತಿ—ಮೆ. ಬಿ ಮಾದಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ನೂಚ್ಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ. ಬೆಳ್ಳಿಯಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸೆಕ್ಷೇರ್ಸ್)

ಸೂಚನೆ.—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
"ಕೊಡಗು" ಲಿಮಿಟೆಡ್
ಮಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons, Ltd.,

26—28 210, Abdulrehman Street, B O M B A Y 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟ ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್:

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾನುಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನವೊಪ್ಪಿ ನಂಬಿರಿ.
ಪತಿ ವಕ್ಷಿಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ವಿಶೇಷವಾಗಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸಾ ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ವೊಬಲಗನ್ನು ಮುಂದಳ
ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಷನ್ ರೀತಿಯಲ್ಲು ಉದಾರತ್ವದಿಂದ ಕೊಡಲು
ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಾಡಸರು ಮತ್ತು ಹೆಂಗಸರಿಗೆ
ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ವ್ಯೂಹಿತಿಗೆ—ಬಿ. ಎಸ್. ಐಯ್ಯಪ್ಪು,
ಕೊಡಗು ಜೀಪ್ ಏಜೆಂಟ್,
26—22 ಮಹದೇವಪೇಟೆ, ಮಡಿಕೇರಿ.

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಪೂರ್ತವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ಸೋಡುವರೋ ಅವರೆಲ್ಲರೂ ಉಪಯೋಗಿಸುವುದು

ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—11 ಬಿಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್
ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿಸಲಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,181— 0—0
ಜಮಾಬಂಡ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶಕ್ಕೆ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕ್ಕಾದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ಪರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಮ್ಯಾನೇಜರ್ ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಕು 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯ ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯೂಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದಿದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಟರ್ಸ್—
ಕೆ. ಟಿ. ಡೋಂಗರೆ ಕಂಪೆನಿ,
(52—11) ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:— Empire of India Life Building, BOMBAY. 52—25 Branch Office:— 152/3—Commercial Street, BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಧಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಷ್ಟಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದು ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪುದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ಧಾತ್ರ್ಯಾಮೃತ

ಕ ವನಸ್ಪತಿ ರಸಾಕರ್ಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಗಳಿಂದ ತಯಾರಿಸಿದ ಮಧ ರಾಸ್ಯೃತ.

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣಿಗಳಿಗೆ ಉರಿ, ಮೂಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗಠಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದಲ್ಲೇ ಇದರ ಗುಣ ಕಂಡು ಬರುವದು. ಸ್ಮರಣೆ:—ಬೆಳಗಿನಲ್ಲಿ ಒಂದು ತೊಲೆ ಪುಡಿ, ಪಂಜೆಗೆ ಒಂದು ಚಾಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4—0, 3 ಬಾಟ್ಲಿಗೆ ರೂ 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ.)

52—36 ಕೊಡಗಿನ ಏಜಂಟರು—ನಾವೆಲ್ಲಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ.
ಭಕ್ತಾ ಬ್ರದರ್ಸ್, ತಾವರಗೋಡು.] ಎ. ಎನ್ ಹುಚ್ಚಯ್ಯ, ಮರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

೧೮೭೪ರಲ್ಲಿ ಆಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	....	ರೂ. 7,62,42,761
ವಾರ್ಷಿಕ ಉತ್ಪತ್ತಿ	....	ರೂ. 3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	....	ರೂ. 54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	....	ರೂ 16,29,88,814
ಫಂಡ್ಸ್ ಹೆಚ್ಚಿದ್ದು	....	ರೂ 15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕಡಪಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಂಬಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಲ್ಘಾ	ಸಿಂಗಪುರ
ಅಲ್ಲಾಹಾಬಾದು	ಢಾಕಾ	ಲಕ್ನೌ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮಂಗಳೂರು	ರಾಯಪುರ	ತಿರುಚಿನಾಪಳ್ಳಿ
ಬಳ್ಳಾರಿ	ಗಾಲಪತಿ	ಮದರಾಸು	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಧುರೈ	ರಂಗೂನ	ವಿಶಾಖಪಟ್ಟಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, 52—18

ಯಂ. ವಿ. ಮುತ್ತುಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

Printed & published by P. I. Belliappa at 'Kodagu" Press, Mercara for "Kodagu' Ltd.